ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

**BENGALURU
CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬೆಂ.ನ.ವಿ/ಎಸ್‌ವೈಎನ್-17/21/2022-23 ದಿನಾಂಕ: 18.05.2022

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು-560 001

ಮಾನ್ಯರೆ,

**ವಿಷಯ: ದಿನಾಂಕ 13.05.2022 ರಂದು ಜರುಗಿದ 17ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು**

*****

ದಿನಾಂಕ **13.05.2022** ರಂದು ಪೂರ್ವಹ್ನ 11.00 ಗಂಟೆಗೆ ಜರುಗಿದ ಸಿಂಡಿಕೇಟ್ 17ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಾಮಾಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು- 560 001
2. ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು- 560-001
3. ಕುಲಪತಿಗಳು, ಕುಲಸಚಿವರು, ಕುಲಸಚಿವರು(ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ/ರಕ್ಷಾ ಕಡತ

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrarbcu@gmail.com

ಸಂಖ್ಯೆ:ಬಿಸಿಯು/ಎಸ್‌ವೈಎನ್-17/ಸಾಮಾನ್ಯ ಸಭೆ/21 /2022-23 ದಿನಾಂಕ: 18.05.2022.

ದಿನಾಂಕ 13.05.2022 ರಂದು ಪೂರ್ವಾಹ್ನ 11.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ 17 ನೇ ಸಾಮಾನ್ಯ ಸಭೆಯ ನಡವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಡಾ. ವಿ. ಆರ್. ದೇವರಾಜ್ | ಸದಸ್ಯರು |
| 3. | ಶ್ರೀ ಎಂ. ವಿ. ರಂಗಪ್ಪ | ಸದಸ್ಯರು |
| 4. | ಡಾ. ಶಿಂಟಿ ಆಂಟನಿ | ಸದಸ್ಯರು |
| 5. | ಶ್ರಿ. ಕೆ ಶಿವಣ್ಣ | ಸದಸ್ಯರು |
| 6. | ಡಾ. ಗುರುನಾಥರಾವ್ ವೈದ್ಯ | ಸದಸ್ಯರು |
| 7. | ಡಾ. ಅನೇಸಿಯಾ | ಸದಸ್ಯರು |
| 8. | ಶ್ರೀ ಹೆಚ್.ಎನ್. ಹರಿಪ್ರಸಾದ | ಸದಸ್ಯರು |
| 9. | ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 10. | ಡಾ. ಆರ್ ಕೆ ಚಂದ್ರನಾಥ್ | ಸದಸ್ಯರು |
| 11. | ಡಾ:ವಿ. ಲೋಕೇಶ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 12. | ಶ್ರೀ ಸಿ ಎನ್ ಶ್ರೀಧರ, ಕೆ.ಎ.ಎಸ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಸಭೆಯ ಪ್ರಾರಂಭದಲ್ಲಿ ಕುಲಸಚಿವರು ಉಪಸ್ಥಿತರಿದ್ದ ಎಲ್ಲಾ ಸದಸ್ಯರಿಗೆ ಸ್ವಾಗತವನ್ನು ಕೋರಿ 17 ನೇ ಸಾಮಾನ್ಯ ಸಿಂಡಿಕೇಟ್ ಸಭೆಗೆ ಚಾಲನೆ ನೀಡಲು ಸನ್ಮಾನ್ಯ ಕುಲಪತಿಗಳನ್ನು ವಿನಂತಿಸಿದರು.

ಮಾನ್ಯ ಕುಲಪತಿಗಳು ಎಲ್ಲಾ ಸದಸ್ಯರನ್ನು ಇನ್ನೊಮ್ಮೆ ಸ್ವಾಗತಿಸಿ, ಶ್ರೀಮತಿ ಪಿ. ರಾಧಾ ರವರು ವಿಶ್ವವಿದ್ಯಾನಿಲಯದಲ್ಲಿ ವಿತ್ತಾಧಿಕಾರಿಯ ಸೇವೆಯಿಂದ ವರ್ಗಾವಣೆ ಹೊಂದಿದ್ದು, ಶ್ರೀ ಜಿ.ಪಿ. ರಘು, ಜಂಟಿ ನಿರ್ದೇಶಕರು, ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆ ಇವರು ದಿನಾಂಕ 16.03.2022 ರಂದು ವಿಶ್ವವಿದ್ಯಾನಿಲಯದ ವಿತ್ತಾಧಿಕಾರಿಗಳ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದನ್ನು ಮತ್ತು

ಪ್ರೊ. ಬಿ. ರಮೇಶ್ ರವರು ದಿನಾಂಕ 22.04.2022 ರಂದು ಕುಲಸಚಿವರು (ಮೌಲ್ಯಮಾಪನ) ಹುದ್ದೆಯಿಂದ ಬಿಡುಗಡೆ ಹೊಂದಿ ತಮ್ಮ ಮಾತೃ ವಿಶ್ವವಿದ್ಯಾನಿಲಯಕ್ಕೆ ಮರಳಿದ್ದು, ಡಾ.ವಿ. ಲೋಕೇಶ್ ಡೀನರು, ಸ್ಕೂಲ್ ಆಫ್ ಪ್ಯೂರ್ ಸೈನ್ಸ್ ಮತ್ತು ಪ್ರಾಧ್ಯಾಪಕರು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ ಇವರು ವಿಶ್ವವಿದ್ಯಾನಿಲಯದ ಕುಲಸಚಿವರು (ಮೌಲ್ಯಮಾಪನ) ರಾಗಿ ನೇಮಕ ಹೊಂದಿ ದಿನಾಂಕ 22.04.2022 ರಂದು ವರದಿ ಮಾಡಿಕೊಂಡಿರುವುದನ್ನು ಸಭೆಗೆ ತಿಳಿಸಿದರು.

ವಿಶ್ವವಿದ್ಯಾನಿಲಯದ ಜಾಗತಿಕ ಭಾಷೆಗಳ ಕೇಂದ್ರಕ್ಕೆ ಸ್ಪ್ಯಾನಿಷ್ ಭಾಷೆ ಕಲಿಸಲು ಸ್ಪೇನ್ ದೇಶದಿಂದ ಒಬ್ಬರು ಶಿಕ್ಷಕರನ್ನು ಒದಗಿಸುವ ಕುರಿತು ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಿದ್ದು, ಇದರಿಂದಾಗಿ ಜೂನ್/ಜುಲೈ ತಿಂಗಳಿಂದ ಒಬ್ಬರು ಶಿಕ್ಷಕರನ್ನು ಸ್ಪೇನ್ ಸರ್ಕಾರ ನಿಯೋಜನೆ ಮಾಡಲಿರುವ ವಿಷಯ ಸಭೆಗೆ ತಿಳಿಸಿದರು.

ವಿಶ್ವವಿದ್ಯಾನಿಲಯದ ಪುರುಷ ಹಾಕಿ ತಂಡ 'ಖೇಲೋ ಇಂಡಿಯಾ' ರಾಷ್ಟ್ರೀಯ ವಿಶ್ವವಿದ್ಯಾನಿಲಯಗಳ ಪಂದ್ಯಾಟದಲ್ಲಿ ಹಾಗೂ ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯಗಳ ಪಂದ್ಯಾಟದಲ್ಲಿ ಸುವರ್ಣ ಪದಕಗಳನ್ನು ಗೆದ್ದಿರುವ ವಿಷಯವನ್ನು ಸಭೆಗೆ ತಿಳಿಸಿದರು.

ಸಭೆ ಹರ್ಷ ವ್ಯಕ್ತಪಡಿಸಿ ಕ್ರೀಡಾ ಪಟುಗಳಿಗೆ ಶುಭಾಶಯಗಳನ್ನು ದಾಖಲಿಸಿತು.

ಅಲ್- ಅಮೀನ್ ಮಹಾವಿದ್ಯಾಲಯದ ಕುಮಾರಿ.ಇ.ಬಿ.ಅರ್ಪಿತಾ ರವರು ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯಗಳ ಪಂದ್ಯಾಟದ ಮಹಿಳೆಯರ 800 ಮೀಟರ್ ಓಟದ ಸ್ಪರ್ಧೆಯಲ್ಲಿ ಸುವರ್ಣ ಪದಕ ಮತ್ತು ಖೇಲೋ ಇಂಡಿಯಾ ಪಂದ್ಯಾಟದಲ್ಲಿ ರಜತ ಪದಕ ಪಡೆದು ಜಯಗಳಿಸಿರುವುದನ್ನು, ಎಂ.ಎಸ್. ರಾಮಯ್ಯ ಮಹಾವಿದ್ಯಾಯದ ಕುಮಾರಿ.ಬಿ.ಆರ್. ನಂದಿತಾ ರಾಜ್ ರವರು ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯಗಳ ಪಂದ್ಯಾಟದ ಮಹಿಳೆಯರ ಕಿಕ್ ಬಾಕ್ಸಿಂಗ್ ನಲ್ಲಿ ರಜತ ಪದಕವನ್ನು ಹಾಗೂ ಶೇಷಾದ್ರಿಪುರಂ ಸಂಜೆ ಕಾಲೇಜಿನ ಕು. ಕೀರ್ತಿ ರಂಗಸ್ವಾಮಿ ಯವರು ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯಗಳ ಪಂದ್ಯಾಟದ ಮಹಿಳೆಯರ ಸೈಕ್ಲಿಂಗ್ ಟ್ರಾಕ್ಸ್ ಪಂದ್ಯಾಟದಲ್ಲಿ ಕಂಚಿನ ಪದಕವನ್ನು ಪಡೆದು ಜಯಗಳಿಸಿರುವ ವಿಷಯವನ್ನು ಹೆಮ್ಮೆಯಿಂದ ಸಭೆಗೆ ತಿಳಿಸಿದರು.

ಈ ಎಲ್ಲಾ ಕ್ರೀಡಾ ಪಟುಗಳು ವಿಶ್ವವಿದ್ಯಾನಿಲಯಕ್ಕೆ ಕೀರ್ತಿ ತಂದಿರುವದಕ್ಕೆ ಸಭೆ ಅತ್ಯಂತ ಸಂತೋಷವನ್ನು ವ್ಯಕ್ತಪಡಿಸಿ ಎಲ್ಲಾ ಕ್ರೀಡಾ ಪಟುಗಳಿಗೆ ಶುಭಾಶಯಗಳನ್ನು ತಿಳಿಸಿ ದಾಖಲಿಸಿತು.

ಎಲ್ಲಾ ಸದಸ್ಯರ ಸಹಕಾರದಿಂದ ವಿಶ್ವವಿದ್ಯಾನಿಲಯ ಪ್ರಥಮ ಘಟಿಕೋತ್ಸವವನ್ನು ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಳಿಸಿದ್ದು ಅದಕ್ಕಾಗಿ ಸಹಕರಿಸಿದ ಪ್ರಾಧಿಕಾರದ ಎಲ್ಲಾ ಸದಸ್ಯರಿಗೆ ಕೃತಜ್ಞತೆಗಳನ್ನು ವ್ಯಕ್ತ ಪಡಿಸಿದರು. ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲು ಸದಸ್ಯ ಕಾರ್ಯದರ್ಶಿಗಳಾದ ಕುಲಸಚಿವರಿಗೆ ತಿಳಿಸಿದರು.

ಕಾರ್ಯಸೂಚಿ ಪ್ರಾರಂಭಿಸುವ ಮೊದಲು ಸದಸ್ಯರಾದ ಶ್ರೀ ಹೆಚ್.ಎನ್. ಹರಿಪ್ರಸಾದ ರವರು MSc Life Science (Plant Science) ಮತ್ತು (Animal Science) ಕೋರ್ಸುಗಳ ವಿದ್ಯಾರ್ಥಿಗಳಿಗೆ M.Sc Botany ಮತ್ತು M.Sc Zoology ಪದವಿ ನೀಡುವ ಕುರಿತು ಮತ್ತು ಸೇಂಟ್ ಜೋಸಫ್ ಕಾಲೇಜು ಸಂಬಂಧಿಸಿದಂತೆ ದಿನಾಂಕ 20.04.2022ರಂದು ಸರ್ಕಾರಕ್ಕೆ ಬರೆದ ಪತ್ರ ಕುರಿತಂತೆ ಪ್ರಸ್ತಾಪಿಸಿಸಲು ಅಧ್ಯಕ್ಷರ ಅನುಮತಿ ಕೋರಿದರು. ಅಧ್ಯಕ್ಷರು ಕಾರ್ಯಸೂಚಿ ಮುಗಿದ ನಂತರ ಅವುಗಳನ್ನು ಪರಿಗಣಿಸಲಾಗುವುದು ಎಂದು ಹೇಳಿದರು. ನಂತರ ಸೂಚಿಯ ಪ್ರಕಾರ ವಿಷಯಗಳನ್ನು ಚರ್ಚೆಗೆ ಕೈಗೆತ್ತಿಕೊಳ್ಳಲಾಯಿತು.

| | |
|---|---|
| **ವಿಷಯ ಸಂಖ್ಯೆ-1:** | ದಿನಾಂಕ 08.03.2022 ರಂದು ಜರುಗಿದ ಸಿಂಡಿಕೇಟ್ 16ನೇ ಸಾಮಾನ್ಯ ಸಭೆ 21.03.2022 ವಿಶೇಷ ಸಭೆ ಹಾಗೂ 22.03.2022 ಮತ್ತು 08.04.2022 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಗಳ ನಡವಳಿಗಳ ಧೃಢೀಕರಣ ಮತ್ತು ಅನುಪಾಲನಾ ವರದಿ. |

ಸಿಂಡಿಕೇಟ್ ತೀರ್ಮಾನ:

**ದಿನಾಂಕ 08.03.2022 ರಂದು ಜರುಗಿದ ಸಿಂಡಿಕೇಟ್ 16ನೇ ಸಾಮಾನ್ಯ ಸಭೆ 21.03.2022 ವಿಶೇಷ ಸಭೆ ಹಾಗೂ 22.03.2022 ಮತ್ತು 08.04.2022 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಗಳ ನಡವಳನ್ನು ಧೃಢೀಕರಿಸಿ ಅವಗಳ ಮೇಲೆ ಕೈಗೊಂಡ ಕ್ರಮದ ವರದಿಗಳಿಗೆ ಅನುಮೋದನೆ ನೀಡಲಾಯಿತು.**

**ದಿನಾಂಕ 22.03.2022 ರ ನಡವಳಿ ವಿಷಯ ಸಂಖ್ಯೆ.04ರ ಕ್ರಮ ಸಂಖ್ಯೆ (4) ರಲ್ಲಿರುವ ಡಾ:ವಿ.ಆರ್. ದೇವರಾಜ್ ಎಂಬ ದಾನಿಗಳ ಹೆಸರಿಗೆ ಬದಲಾಗಿ Old Students of B.Sc Bio-Chemistry Department ಎಂದು ಬದಲಾಯಿಸಬೇಕೆಂದು ದಾನಿಗಳು/ಸದಸ್ಯರಾದ ಡಾ.ವಿ.ಆರ್. ದೇವರಾಜ್ ರವರು ಮಾಡಿದ ಮನವಿಗೆ ಸಭೆ ಒಪ್ಪಿಗೆ ನೀಡಿತು.**

| | |
|---|---|
| **ವಿಷಯ ಸಂಖ್ಯೆ-2:** | 'ಖೇಲೋ ಇಂಡಿಯಾ" ಅಖಿಲ ಭಾರತ ವಿಶ್ವವಿದ್ಯಾಲಯಗಳ ಪಂದ್ಯಾಟದಲ್ಲಿ ಸತತವಾಗಿ ಎರಡನೇ ಬಾರಿ ಹಾಕಿ ಪಂದ್ಯದಲ್ಲಿ ರಾಷ್ಟ್ರೀಯ ಚಾಂಪಿಯನ್ ಟ್ರೋಫಿ ಮತ್ತು ಚಿನ್ನದ ಪದಕ ಗಳಿಸಿದ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಹಾಕಿ ಆಟಗಾರರಿಗೆ ಮತ್ತು ದಕ್ಷಿಣ ವಲಯ ವಿಶ್ವವಿದ್ಯಾಲಯಗಳ ಹಾಗೂ ಅಖಿಲ ಭಾರತ ವಿಶ್ವವಿದ್ಯಾಲಯಗಳ ಪಂದ್ಯಾಟದಲ್ಲಿ ವಿವಿಧ ಪದಕಗಳನ್ನು ಪಡೆದ ಕ್ರೀಡಾಪಟುಗಳಿಗೆ ನಗದು ಬಹುಮಾನ ನೀಡಿ ಸತ್ಕರಿಸುವ ಕುರಿತು. |

**ಪರಾಮರ್ಶಕ ಟಿಪ್ಪಣಿ**

1. ಭಾರತ ಸರ್ಕಾರದ ಕ್ರೀಡಾ ಇಲಾಖೆಯ 'ಖೇಲೋ ಇಂಡಿಯಾ" ಅಖಿಲ ಭಾರತ ವಿಶ್ವವಿದ್ಯಾಲಯಗಳ ಪಂದ್ಯಾಟದಲ್ಲಿ ದಿನಾಂಕ 01.05.2022 ರಂದು ಜರಿಗಿದ ಅಂತಿಮ ಪಂದ್ಯಾಟದಲ್ಲಿ, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪುರುಷರ ಹಾಕಿ ತಂಡ, ಗುರುನಾನಕ ದೇವ್ ವಿಶ್ವವಿದ್ಯಾನಿಲಯದ ತಂಡವನ್ನು ಪರಾಭವಗೊಳಿಸಿ, ಎರಡನೇ ಸಲ ಅಭೂತಪೂರ್ವ ಜಯ ಗಳಿಸಿ **ರಾಷ್ಟ್ರೀಯ ಚಾಂಪಿಯನ್ ಟ್ರೋಫಿ** ಪಡೆದಿರುತ್ತದೆ.
2. ಖೇಲೋ ಇಂಡಿಯಾ ಪಂದ್ಯಾಟದ ಅಥ್ಲೆಟಿಕ್ಸ 800 ಮೀಟರ (ಮಹಿಳಾ) ಓಟದಲ್ಲಿ ಕುಮಾರಿ: ಅರ್ಪಿತ ಇ.ಬಿ. ಅಲ್- ಅಮೀನ್ ಕಾಲೇಜು ಅವರು ರಜತ ಪದಕ ಗಳಿಸಿ ವಿಶ್ವವಿದ್ಯಾನಿಲಯಕ್ಕೆ ಹೆಸರು ತಂದಿರುತ್ತಾರೆ.
3. ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯಗಳ ಪಂದ್ಯಾಟದಲ್ಲಿ ಸಹ ವಿಶ್ವವಿದ್ಯಾನಿಲಯದ ಹಾಕಿ ತಂಡ ಚಿನ್ನದ ಪದಕ ಪಡೆದಿರುತ್ತದೆ.
4. ಅಖಿಲ ಭಾರತ ಅಂತರ ವಿಶ್ವವಿದ್ಯಾಲಯಗಳ ವಿವಿಧ ಪಂದ್ಯಾಟದಲ್ಲಿ ಕೆಳಕಂಡ ಕ್ರೀಡಾಪಟುಗಳು ಜಯಗಳಿಸಿ ಪದಕಗಳನ್ನು ಪಡೆದಿರುತ್ತಾರೆ.
    1. ಅಥ್ಲೆಟಿಕ್ಸ -(ಮಹಿಳಾ) 800 ಮೀಟರ ಓಟಕ ಸ್ಪರ್ಧೆ- ಚಿನ್ನದ ಪದಕ - ಕುಮಾರಿ. ಅರ್ಪಿತ ಇ.ಬಿ.
    2. ಕಿಕ್ ಬಾಕ್ಸಿಂದ (ಮಹಿಳಾ) ರಜತ ಪದಕ - ಕು. ನಂದಿತ ರಾಜ್ ಬಿ.ಆರ್, ಎಂ.ಎಸ್. ರಾಮಯ್ಯ ಕಲಾ, ವಿಜ್ಞಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ
    3. ಸೈಕ್ಲಿಂಗ್ ಟ್ರ್ಯಾಕ್ - (ಮಹಿಳಾ) ಕಂಚಿನ ಪದಕ - ಕುಮಾರಿ. ಕೀರ್ತಿ ರಂಗಸ್ವಾಮಿ, ಶೇಷಾದ್ರಿಪುರಂ ಸಂಜೆ ಡಿಗ್ರಿ ಕಾಲೇಜ್

2019–20ನೇ ಸಾಲಿನಲ್ಲಿ ಕೂಡ ನಮ್ಮ ವಿಶ್ವವಿದ್ಯಾಲಯದ ಹಾಕಿ ತಂಡ ಓರಿಸ್ಸಾ ರಾಜ್ಯದ ಭುವನೇಶ್ವರದಲ್ಲಿ ಜರುಗಿದ ಪಂದ್ಯಾಟದಲ್ಲಿ **ರಾಷ್ಟ್ರೀಯ ಚಾಂಪಿಯನ್ ಟ್ರೋಫಿ** ಗಳಿಸಿದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಸಮ ಕುಲಾಧಿಪತಿಗಳು ಹಾಗೂ ಕರ್ನಾಟಕ ಸರ್ಕಾರದ ಉಪ ಮುಖ್ಯಮಂತ್ರಿಗಳಾಗಿದ್ದ ಡಾ: ಸಿ.ಎನ್. ಅಶ್ವತಾನಾರಾಯಣ ರವರು ದಿನಾಂಕ 02.03.2020 ರಂದು ವಿಶ್ವವಿದ್ಯಾಲಯದ ಹಾಕಿ ತಂಡದ ಕ್ರೀಡಾಪಟುಗಳಿಗೆ ಮತ್ತು ಇಬ್ಬರು ಅಧಿಕಾರಿಗಳಿಗೆ ತಲಾ ರೂ.25,000/– ಗಳಂತೆ ನಗದು ಬಹುಮಾನವನ್ನು ಘೋಷಿಸಿ ಒಟ್ಟು ರೂ.4,50,000/–(ರೂಪಾಯಿ ನಾಲ್ಕು ಲಕ್ಷಗಳ ಐವತ್ತು ಸಾವಿರ) ಗಳನ್ನು ಮಂಜೂರು ಮಾಡಿ ಪಾವತಿಸಲಾಗಿದೆ.

ದಿನಾಂಕ 16.02.2020 ರಂದು ಜರುಗಿದ ಸಿಂದಿಕೇಟ ಸಭೆಯ ತೀರ್ಮಾನದಂತೆ ವಿವಿಧ ಪಂದ್ಯಾಟಗಳಲ್ಲಿ ಜಯಗಳಿಸಿದ ಕ್ರೀಡಾಪಟುಗಳಿಗೆ ಕೆಳಗೆ ನಮೂದಿಸಿದ ಮೊತ್ತವನ್ನು ನಗದು ಬಹುಮಾನವಾಗಿ ನೀಡಲಾಗುತ್ತಿದೆ.

| ಪಂದ್ಯಾಟ | ಸ್ಥಾನ | ನಗದು ಬಹುಮಾನ |
|---|---|---|
| ಅಖಿಲ ಭಾರತ ವಿಶ್ವವಿದ್ಯಾಲಯಗಳ ಪಂದ್ಯಾಟಗಳಲ್ಲಿ ಭಾಗವಹಿಸಿರುವ ಕ್ರೀಡಾಪಟುಗಳಿಗೆ | ಪ್ರಥಮ | ರೂ.20,000/– |
| | ದ್ವಿತೀಯ | ರೂ.15,000/– |
| | ತೃತೀಯ | ರೂ.10,000/– |
| ದಕ್ಷಿಣ ವಲಯ ವಿಶ್ವವಿದ್ಯಾಲಯಗಳ ಪಂದ್ಯಾಟಗಳಲ್ಲಿ ಬಾಗವಹಿಸಿರುವ ಕ್ರೀಡಾಪಟುಗಳಿಗೆ | ಪ್ರಥಮ | ರೂ.7000/– |
| | ದ್ವಿತೀಯ | ರೂ.5000/– |

ಮೇಲಿನ ದರದಂತೆ ಅನುಮೋದಿತ ನಗದು ಬಹುಮಾನವನ್ನು ಕೆಳಕಂಡ ಕ್ರೀಡಾಪಟುಗಳಿಗೆ ನೀಡಬಹುದಾಗಿದೆ:

| ಕ್ರ. ಸಂ | ವಿಶ್ವವಿದ್ಯಾಲಯಗಳ ಪಂದ್ಯಾಟಗಳು | ಪಂದ್ಯಾಟ | ಪಡೆದ ಸ್ಥಾನ | ಕ್ರೀಡಾಪಟುಗಳ ಸಂಖ್ಯೆ | ಬಹುಮಾನದ ಮೊತ್ತ |
|---|---|---|---|---|---|
| 1 | ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯಗಳ ಪಂದ್ಯಾಟ | ಹಾಕಿ (ಪುರುಷರು) | ಚಿನ್ನದ ಪದಕ | 17 | 7000x17 = ರೂ.1,19,000 |
| 2 | ಅಖಿಲ ಭಾರತ ವಿಶ್ವವಿದ್ಯಾಲಯಗಳ ಪಂದ್ಯಾಟ | ಅಥ್ಲೆಟಿಕ್ಸ – (ಮಹಿಳಾ) 800 ಮೀಟರ ಓಟಕ ಸ್ಪರ್ಧೆ ಕು: ಅರ್ಪಿತ ಇ.ಬಿ | ಚಿನ್ನದ ಪದಕ | 01 | ರೂ: 20,000 |
| 3 | " | ಕಿಕ್ ಬಾಕ್ಸಿಂಗ (ಮಹಿಳಾ) – ಕು. ನಂದಿತ ರಾಜ್ ಬಿ.ಆರ್ | ರಜತ ಪದಕ | 01 | ರೂ. 15,000/– |
| 4 | " | ಸೈಕ್ಲಿಂಗ್ ಟ್ರ್ಯಾಕ್ (ಮಹಿಳಾ)– ಕು. ಕೀರ್ತಿ ರಂಗಸ್ವಾಮಿ | ಕಂಚಿನ ಪದಕ | 01 | ರೂ. 10,000/– |

ಮೇಲಿನ ದರಗಳ ಪ್ರಕಾರ ನಗದು ಬಹುಮಾನ ನೀಡಲು ಹಾಗೂ ಈಗಾಗಲೇ ಸಿಂಡಿಕೇಟ್ ಸಭೆ ನಿರ್ಣಯಿಸಿದಂತೆ, ಈ ವರ್ಷ ಕೂಡ ಹಾಕಿ ತಂಡ ಮತ್ತು 2 ಅಧಿಕಾರಿಗಳನ್ನು ಸತ್ಕರಿಸಿ ಗೌರವಿಸಲು ರೂ. 25,000–00 ಗಳ ನಗದು ಬಹುಮಾನ ನೀಡುವ ಹಾಗೂ ಖೇಲೋ ಇಂಡಿಯಾ ಪಂದ್ಯಾಟದ ಅಥ್ಲೆಟಿಕ್ಸ 800 ಮೀಟರ ಓಟದಲ್ಲಿ ರಜತ ಪದಕ ಗಳಿಸಿ ವಿಶ್ವವಿದ್ಯಾನಿಲಯಕ್ಕೆ ಹೆಸರು ತಂದಿರುವ ಕುಮಾರಿ: ಅರ್ಪಿತ ಇ.ಬಿ. ಅವರಿಗೆ ಹಾಗೂ ತಂಡದ ಇಬ್ಬರು ಅಧಿಕಾರಿಗಳಿಗೆ ತಲಾ ರೂ. 15,000/– ನಗದು ಬಹುಮಾನ ನಿಗದಿಪಡಿಸುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

ಸಿಂಡಿಕೇಟ್ ತೀರ್ಮಾನ:

I. ವಿವಿಧ ಪಂದ್ಯಾಟದಗಳಲ್ಲಿ ಜಯಗಳಿಸುವ ಕ್ರೀಡಾಪಟುಗಳಿಗೆ ನೀಡುವ ಪ್ರೋತ್ಸಾಹ ಧನವನ್ನು ಈ ಕೆಳಗಿನಂತೆ ಪರಿಷ್ಕರಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

| ಪಂದ್ಯಾಟ | ಸ್ಥಾನ | ನಗದು ಬಹುಮಾನ |
|---|---|---|
| ಅಖಿಲ ಭಾರತ ವಿಶ್ವವಿದ್ಯಾಲಯಗಳ ಪಂದ್ಯಾಟ/ಖೇಲೋಇಂಡಿಯಾ ಪಂದ್ಯಾಟಗಳಲ್ಲಿ ಭಾಗವಹಿಸಿರುವ ಕ್ರೀಡಾಪಟುಗಳಿಗೆ | ಪ್ರಥಮ | ರೂ.25,000/- |
| | ದ್ವಿತೀಯ | ರೂ.20,000/- |
| | ತೃತೀಯ | ರೂ.15,000/- |
| ದಕ್ಷಿಣ ವಲಯ ವಿಶ್ವವಿದ್ಯಾಲಯಗಳ ಪಂದ್ಯಾಟಗಳಲ್ಲಿ ಬಾಗವಹಿಸಿರುವ ಕ್ರೀಡಾಪಟುಗಳಿಗೆ | ಪ್ರಥಮ | ರೂ.12,000/- |
| | ದ್ವಿತೀಯ | ರೂ.10,000/- |
| | ತೃತೀಯ | ರೂ,5,000/- |

II. 'ಖೇಲೋ ಇಂಡಿಯಾ" ಅಖಿಲ ಭಾರತ ವಿಶ್ವವಿದ್ಯಾಲಯಗಳ ಪಂದ್ಯಾಟದಲ್ಲಿ ಚಾಂಪಿಯನ್‌ಶಿಪ್ ಗಳಿಸಿದ ವಿದ್ಯಾನಿಲಯದ ಪುರುಷ ಹಾಕಿ ತಂಡದ 17 ಆಟಗಾರರಿಗೆ ಮತ್ತು ಇಬ್ಬರು ಅಧಿಕಾರಿಗಳಾದ ಮ್ಯಾನೇಜರ್ ಹಾಗೂ ಕೋಚ್ ಗಳಿಗೆ ತಲಾ ರೂ.25,000/-ಗಳಂತೆ, ಮಹಿಳೆಯರ 800 ಮೀಟರ್ ಓಟದ ಸ್ಪರ್ಧೆಯಲ್ಲಿ ರಜತ ಪದಕ ಪಡೆದ ಕುಮಾರಿ ಇ.ಬಿ. ಅರ್ಪಿತಾ ರವರಿಗೆ ಹಾಗೂ ತಂಡದ ಮ್ಯಾನೇಜರ್ ಹಾಗೂ ಕೋಚ್‌ಗಳಿಗೆ ತಲಾ ರೂ.20,000/- ರಂತೆ ಪ್ರೋತ್ಸಾಹ ಧನವನ್ನು ಮಂಜೂರಿಸಲು ತೀರ್ಮಾನಿಸಲಾಯಿತು.

III. ಅಖಿಲ ಭಾರತ ವಿಶ್ವವಿದ್ಯಾಲಯಗಳ ಪಂದ್ಯಾಟ / ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯಗಳ ಪಂದ್ಯಾಟದಲ್ಲಿ ಪದಕಗಳಿಸಿದ ಕ್ರೀಡಾಪಟುಗಳಿಗೆ ಕೆಳಗೆ ನಮೂದಿಸಿದ ಪ್ರೋತ್ಸಾಹ ಧನವನ್ನು ಮಂಜೂರು ಮಾಡಲು ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಿತು.

| ಕ್ರ ಸಂ | ವಲಯ | ಪಂದ್ಯಾಟ | ಪಡೆದ ಸ್ಥಾನ | ಕ್ರೀಡಾಪಟುಗಳ ಸಂಖ್ಯೆ | ಬಹುಮಾನದ ಮೊತ್ತ |
|---|---|---|---|---|---|
| 1 | ಅಖಿಲ ಭಾರತ ವಿಶ್ವವಿದ್ಯಾಲಯಗಳ ಪಂದ್ಯಾಟಗ | ಅಥ್ಲೆಟಿಕ್ಸ - (ಮಹಿಳಾ) 800 ಮೀಟರ ಓಟಕ ಸ್ಪರ್ಧೆ ಕು: ಅರ್ಪಿತಾ ಇ.ಬಿ | ಚಿನ್ನದ ಪದಕ | 01 | ರೂ.25,000/- |
| | | ಕಿಕ್ ಬಾಕ್ಸಿಂಗ (ಮಹಿಳಾ) | ರಜತ ಪದಕ | 01 | ರೂ.20,000/- |
| | | ಸೈಕ್ಲಿಂಗ್ ಟ್ರ್ಯಾಕ್ - (ಮಹಿಳಾ) | ಕಂಚಿನ ಪದಕ | 01 | ರೂ.15,000/- |
| 2 | ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯಗಳ ಪಂದ್ಯಾಟ | ಹಾಕಿ (ಪುರುಷರು) | ಚಿನ್ನದ ಪದಕ | 18 | ರೂ.12,000X18=2,16,000 |

ಎಲ್ಲಾ ಕ್ರೀಡಾಪಟುಗಳಿಗೆ ಶುಭಾಶಯಗಳನ್ನು ದಾಖಲಿಸಲಾಯಿತು.

Item No-3:- 1. Approval of Guidelines relating to Consultancy /Advisory Project.
2. Approval for 'Multi Lingual Vachana translation Project'.

**REFERENCE NOTE:**

In the fast changing Academic environment and as per the advisory of National Education Policy-2020, involvement of faculty in professional consultancy has become the integral part of teaching and research activity. This is also a key evaluation factor for assessment accreditation of the University. In the present scenario, the techniques of research, teaching, planning concept are re-evaluated with the passing time. The faculty and institutions are expected to keep themselves abreast of latest developments and changes. Consultancy services are thus become an integral part of higher education system which has the following advantages:

1. Consultancy practice will enable the teacher for better delivery and the student will perceive the knowledge in a better way;
2. It will enrich experience and knowledge in the professional sphere;
3. It will provide an opportunity for implementing their ideas under actual conditions.

As such, Guidelines for undertaking Consultancy/ Advisory projects are essential for the academic interest of teachers, research scholars and students of the University. The University does not have predefined guidelines in this regard. Hence, based on the guidelines of Bengaluru University notified during August 2016, draft Guidelines are prepared for undertaking consultancy / Advisory Projects in Bengaluru City University.

Further, the Director, Centre for Global Languages of the University has forwarded a letter dated 24.02.2022 along with Proposal received from Sri. Aravind Jatti, President, Basava Samithi, Bengaluru for association of Bengaluru City University in the 'Multi Lingual Vachana Translation Project". The said proposal involves with the translation work as detailed below:

a) To select a Chief Editor of Eminent literary background.
b) Selecting a minimum of 5 translators per language knowing a minimum of two languages in which the translation of the Vachana has already been done,
c) Conducting 3-4 translation workshops( a minimum of 4 days for every language)
d) Translated Vachana scripts to be typed through DTP Operators in different languages, photo copying for corrections and page settings for ready printing process.
e) Proof reading by a language expert to identify the mistakes in the process of typing etc,.
f) Printing to International Standard specifications.
g) Launch Programme to be arranged to give a befitting honor to the various languages in which Vachanas will be published.

The translation work is to be executed by the Centre for Global Languages which is teaching foreign languages. Dr. Jyothi Venkatesh, Director, Centre for Global Languages shall be designated as Nodal Officer for the Vachana Translation Project. In principle acceptance has been communicated to the President of the Basava Samithi.

The Draft Guidelines relating to Consultancy /Advisory Project and the proposal received from the Basava Samithi are placed before the Syndicate for consideration and approval. Internship,

**<u>ಸಿಂಡಿಕೇಟ್ ತೀರ್ಮಾನ:</u>**

**ಸಮಾಲೋಚನೆ (Consultancy) ಕುರಿತಂತೆ ಸಿದ್ಧಪಡಿಸಿದ ಮಾರ್ಗದರ್ಶಿ ನಿಯಮಗಳಿಗೆ ಹಾಗೂ ಬಸವ ಸಮಿತಿಯವರು ಸಲ್ಲಿಸಿದ ವಚನಗಳನ್ನು ವಿದೇಶಿ ಭಾಷೆಗಳಿಗೆ ಭಾಷಾಂತರ ಮಾಡುವ ಪ್ರಸ್ತಾವನೆಯನ್ನು ಪರಿಗಣಿಸಿ ಸರ್ವಾನುಮತದ ಅನುಮೋದನೆ ನೀಡಲಾಯಿತು.**

**ಇಂತಹ ಯೋಜನೆಗಳಿಂದ ವಿಶ್ವವಿದ್ಯಾನಿಲಯದ ಘನತೆ ಹೆಚ್ಚುವುದರ ಜೊತೆಗೆ ನ್ಯಾಕ್ ಮತ್ತು ಯು.ಜಿ.ಸಿ 12(ಬಿ) ಮಾನ್ಯತೆಯ ಸಂದರ್ಭದಲ್ಲಿ ಹೆಚ್ಚಿನ ಅಂಕಗಳನ್ನು ಪಡೆಯಲು ಅನುಕೂಲವಾಗುವುದೆಂದು ಕುಲಪತಿಗಳು ಸಭೆಗೆ ತಿಳಿಸಿದರು.**

**ರಾಷ್ಟ್ರೀಯ ಶಿಕ್ಷಣ ನೀತಿ ಅಡಿಯಲ್ಲಿ ವಿದ್ಯಾರ್ಥಿಗಳಿಗೆ Apprenticeship, Incubation Centre ಮುಂತಾದ ಚಟುವಟಿಕೆಗಳಿಗಾಗಿ ವಿಶ್ವವಿದ್ಯಾನಿಲಯದಲ್ಲಿ ಮಹಾವಿದ್ಯಾನಿಲಯಗಳ ವಿದ್ಯಾರ್ಥಿಗಳು 15 ರಿಂದ 30ದಿವಸಗಳ ಅವಧಿಗೆ ಕೆಲಸಮಾಡಿ ಕ್ರೆಡಿಟ್ ಸಂಪಾದಿಸುವ ಕುರಿತು ವಿಧಿ ವಿಧಾನಗಳನ್ನು ಸಿದ್ಧಪಡಿಸಬೇಕೆಂದು ಸಭೆ ಸೂಚಿಸಿತು.**

| | |
|---|---|
| ವಿಷಯ ಸಂಖ್ಯೆ 4: | ಡಾ. ತಾಂಡವಗೌಡ ಟಿ.ಎನ್, ಸಹಾಯಕ ಪ್ರಾಧ್ಯಾಪಕರು, ಆಂಗ್ಲ ವಿಭಾಗ ಅವರು ಲಂಡನ್, ಯುನೈಟೆಡ್ ಕಿಂಗಡಮ್‌ನಲ್ಲಿ ನಡೆಯುವ Education World Forumನಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಪ್ರತಿನಿಧಿಯಾಗಿ ಭಾಗವಹಿಸಲು ಅನುಮತಿಸುವ ಬಗ್ಗೆ. |

ಕರ್ನಾಟಕ ರಾಜ್ಯದ ಉನ್ನತ ಶಿಕ್ಷಣ ಪರಿಷತ್ ಪತ್ರ ಸಂಖ್ಯೆ: KSHEC/45 EWF/Visit/2019-20/298 ದಿನಾಂಕ: 21.04.2022ರಲ್ಲಿ ಲಂಡನ್, ಯುನೈಟೆಡ್ ಕಿಂಗಡಮ್‌ನಲ್ಲಿ ದಿನಾಂಕ: 17.05.2022ರಿಂದ 26.05.2022ರವರೆಗೆ ನಡೆಯಲಿರುವ Education World Forumನಲ್ಲಿ ಉನ್ನತ ಶಿಕ್ಷಣ ಸಚಿವರಾದ ಡಾ.ಸಿ.ಎನ್.ಅಶ್ವಥ್‌ನಾರಾಯಣ್ ಅವರ ಅಧ್ಯಕ್ಷತೆಯಲ್ಲಿ ಕರ್ನಾಟಕದಿಂದ ಭಾಗವಹಿಸುತ್ತಿರುವ ನಿಯೋಗದಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಪ್ರತಿನಿಧಿಯಾಗಿ ಡಾ. ತಾಂಡವಗೌಡ ಟಿ.ಎನ್, ಸಹಾಯಕ ಪ್ರಾಧ್ಯಾಪಕರು, ಆಂಗ್ಲ ವಿಭಾಗ ಅವರನ್ನು ನಾಮನಿರ್ದೇಶನ ಮಾಡಿರುವುದಾಗಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕರು ತಿಳಿಸಿರುತ್ತಾರೆ. ಇದಕ್ಕೆ ತಗಲುವ ಪ್ರಯಾಣ ಭತ್ಯೆ, ವಸತಿ, ಸ್ಥಳೀಯ ವೆಚ್ಚಗಳನ್ನು ಬ್ರಿಟಿಷ್ ಕೌನ್ಸಿಲ್‌ರವರು ಭರಿಸುವುದಾಗಿ ಸಹ ತಿಳಿಸಿರುತ್ತಾರೆ.

ಡಾ. ತಾಂಡವಗೌಡ ಟಿ.ಎನ್, ಸಹಾಯಕ ಪ್ರಾಧ್ಯಾಪಕರು, ಸದರಿ Education World Forumನಲ್ಲಿ ಭಾಗವಹಿಸಲು ದಿನಾಂಕ: 17.05.2022ರಿಂದ 26.05.2022ರವರೆಗೆ ಲಂಡನ್‌ಗೆ OOD ಮೇಲೆ ತೆರಳಲು ಅನುಮತಿ ನೀಡುವಂತೆ ದಿನಾಂಕ: 18.04.2022 ಪತ್ರದಲ್ಲಿ ಕೋರಿರುತ್ತಾರೆ. ಯುಜಿಸಿ ನಿಯಮಾವಳಿ 2018, 8.1 i (a) ಪ್ರಕಾರ ಒಂದು ಶೈಕ್ಷಣಿಕ ವರ್ಷದಲ್ಲಿ 30 ದಿನಗಳಿಗೆ duty leave ಮಂಜೂರು ಮಾಡಲು ಅವಕಾಶವಿದ್ದು, ಎಲ್ಲಾ ಖರ್ಚು ವೆಚ್ಚಗಳನ್ನು British Council of India ರವರು ಭರಿಸುವರೆಂದು ತಿಳಿಸಿರುವುದರ ಹಿನ್ನಲೆಯಲ್ಲಿ ಸದರಿ ಸಹಾಯಕ ಪ್ರಾಧ್ಯಾಪಕರಿಗೆ OOD ಮೇಲೆ ತೆರಳಲು ಅನುಮತಿ ನೀಡಲಾಗಿದೆ. ಈ ವಿಷಯವನ್ನು ಸಿಂಡಿಕೇಟ್‌ನ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

<u>ಸಿಂಡಿಕೇಟ್ ತೀರ್ಮಾನ:</u>

**ಡಾ. ತಾಂಡವಗೌಡ. ಟಿ. ಎನ್. ಸಹಾಯಕ ಪ್ರಾಧ್ಯಾಪಕರು ಆಂಗ್ಲ ವಿಭಾಗ ಇವರಿಗೆ ಲಂಡನ್, ಯುನೈಟೆಡ್ ಕಿಂಗಡಮ್ (UK)ನಲ್ಲಿ ಜರುಗುವ Education World Forumನಲ್ಲಿ ಕರ್ನಾಟಕ ರಾಜ್ಯದ ಉನ್ನತ ಶಿಕ್ಷಣ ಪರಿಷತ್ ಉನ್ನತ ಶಿಕ್ಷಣ ಪರಿಷತ್ತಿನ ಪ್ರತಿನಿಧಿಯಾಗಿ ಭಾಗವಹಿಸಲು. ವಿಶ್ವವಿದ್ಯಾನಿಲಯಕ್ಕೆ ಯಾವುದೇ ಹಣಕಾಸಿನ ಬಾಧ್ಯತೆ ಇಲ್ಲದೆ OOD ಮೇಲೆ ತೆರಳಲು ನೀಡಿದ ಅನುಮತಿಯನ್ನು ಸ್ಥಿರೀಕರಿಸಲಾಯಿತು.**

**ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಆಯ್ಕೆಯಾಗಿರುವ ಡಾ. ಟಿ.ಎನ್ ತಾಂಡವಗೌಡ ರವರಿಗೆ ಸಭೆಯು ಅಭಿನಂದನೆಗಳನ್ನು ದಾಖಲಿಸಿತು.**

**ವಿಷಯ ಸಂಖ್ಯೆ 5:** 2022-23ನೇ ಶೈಕ್ಷಣಿಕ ಸಾಲಿಗಾಗಿ ಸಂಯೋಜನೆಯ ಶುಲ್ಕವನ್ನು ಹೆಚ್ಚಿಸಿ ಅಧಿಸೂಚನೆ ಪ್ರಕಟಿಸಿರುವ ಮತ್ತು ಸ್ಥಳೀಯ ವಿಚಾರಣೆ ಸಮಿತಿ ರಚಿಸುವ ಕುರಿತು.

2022-23ನೇ ಶೈಕ್ಷಣಿಕ ಸಾಲಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ 13 ವಿಧಾನಸಭಾ ಕ್ಷೇತ್ರಗಳಾದ, ಬಸವನಗುಡಿ, ಬಿ.ಟಿ.ಎಂ ಲೇಔಟ್, ಬ್ಯಾಟರಾಯನಪುರ, ಚಿಕ್ಕಪೇಟ್, ಗಾಂಧಿನಗರ, ಚಾಮರಾಜಪೇಟೆ, ಹೆಬ್ಬಾಳ, ಜಯನಗರ, ಮಲ್ಲೇಶ್ವರ, ರಾಜಾಜಿನಗರ, ಶಾಂತಿನಗರ, ಶಿವಾಜಿನಗರ ಮತ್ತು ಯಲಹಂಕ ಕ್ಷೇತ್ರಗಳ ಸಂಯೋಜಿತ ಕಾಲೇಜುಗಳ ಹಾಗೂ ಆರ್ಹಶಿಕ್ಷಣ ಸಂಸ್ಥೆಗಳಿಂದ ವಿವಿಧ ಸ್ನಾತಕ/ಸ್ನಾತಕೋತ್ತರ ಹಾಗೂ ಬಿ.ಇಡಿ/ಬಿ.ಪಿ.ಇಡಿ/ಎಂ.ಪಿ.ಡಿ/ ಕೋರ್ಸುಗಳು ವಾರ್ಷಿಕ ಸಂಯೋಜನೆ ಮುಂದುವರಿಕೆ/ಹೊಸ ಸಂಯೋಜನೆ/ಕಾಲೇಜು/ ಹೊಸ ವಿಷಯ ಕೋರ್ಸುಗಳು/ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣ/ಶಾಶ್ವತ ಸಂಯೋಜನೆ/ವಿದ್ಯಾರ್ಥಿ ಪ್ರಮಾಣ ಕಡಿತ/ಕೋರ್ಸುಗಳ ಮುಚ್ಚುವಿಕೆ/ಶ್ವಾಶತ ಸಂಯೋಜನೆ ಮುಂದುವರಿಕೆ/ ಕಾಲೇಜು/ ಆಡಳಿತ ಮಂಡಳಿಯ ಹೆಸರು/ಸ್ಥಳ ಬದಲಾವಣೆ/ಇತ್ಯಾದಿ ವಿವಿಧ ರೀತಿಯ ಸಂಯೋಜನೆ ಪ್ರಕ್ರಿಯೆಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 59 ಸರ್ಕಾರದ ಆದೇಶದ ಅನ್ವಯ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲು ದಿನಾಂಕ 29.04.2022ರಂದು ಅಧಿಸೂಚನೆ ಹೊರಡಿಸಲಾಯಿತು.

2020-21ನೇ ಸಾಲಿಗೆ ಕೋವಿಡ್ ಸಾಂಕ್ರಾಮಿಕ ರೋಗದ ಕಾರಣದಿಂದ 2019-20ನೇ ಸಾಲಿನಲ್ಲಿ ನಿಗಧಿ ಪಡಿಸಿದ್ದ ಸಂಯೋಜನೆ ಶುಲ್ಕದಲ್ಲಿ, ದಿನಾಂಕ:05.06.2020ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಶೇಕಡ 10% ಕಡಿತಗೊಳಿಸಿರುವ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ತದನಂತರ ಕೋವಿಡ್ ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ 2021-22ನೇ ಸಾಲಿಗೂ ಸಹ ಸಂಯೋಜನೆಯ ಶುಲ್ಕವನ್ನು ಮುಂದುವರೆಸಲಾಯಿತು. ರಾಷ್ಟ್ರೀಯ ಶಿಕ್ಷಣ ನೀತಿ (NEP 2020) ಜಾರಿಗೊಳಿಸಿರುವ ಆದೇಶದ ಅನ್ವಯ 2019-20ರ ಸಾಲಿನ

ಸಂಯೋಜನಾ ಶುಲ್ಕಕ್ಕೆ ಶೇಕಡಾ 10% ಹೆಚ್ಚಿಸಿ, ಸ್ನಾತಕ/ಸ್ನಾತಕೋತ್ತರ. ಕೋರ್ಸುಗಳು/ವಿಷಯವಾರು ಶುಲ್ಕವನ್ನು ನಿಗಧಿಗೊಳಿಸಿ 2022-23ನೇ ಸಾಲಿಗೆ ಸಂಯೋಜನೆಯ ಶುಲ್ಕವನ್ನು ಹೆಚ್ಚಿಸಿ ದಿನಾಂಕ 29.04.2022ರಂದು ಅಧಿಸೂಚನೆಯನ್ನು ಹೊರಡಿಸಿ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸಲಾಗಿದೆ ಬೆಂಗಳೂರು ವಿಶ್ವವಿದ್ಯಾನಿಲಯ ಮತ್ತು ಉತ್ತರ ವಿಶ್ವವಿದ್ಯಾನಿಲಯಗಳಿಗೆ ಹೋಲಿಸಿದರೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಂಯೋಜನೆ ಶುಲ್ಕ ಕಡಿಮೆ ಇರುವುದು ಗಮನಿಸಬಹುದು.

2022-23ನೇ ಸಾಲಿಗೆ ಸಂಯೋಜನ ಶುಲ್ಕಕ್ಕೆ ಶೇಕಡಾ 10% ಹೆಚ್ಚಿಸಿ ಹೊರಡಿಸಿರುವ ಅಧಿಸೂಚನೆ ಹಾಗೂ ಸ್ಥಳೀಯ ವಿಚಾರಣೆ ಸಮಿತಿಗಳನ್ನು ರಚಿಸುವ ಕುರಿತು ಸಿಂಡಿಕೇಟ್ ಸಭೆಯ ನಿರ್ಣಯ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

**ಚರ್ಚೆ:**

ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ನವರು ದ್ವಿತೀಯ ಮತ್ತು ತೃತೀಯ ವರ್ಷದ ವಿದ್ಯಾರ್ಥಿಗಳಿಂದ ವಿಶ್ವವಿದ್ಯಾನಿಲಯಕ್ಕೆ ಸಂದಾಯವಾಗಬೇಕಾದ ಶುಲ್ಕ ಸಂದಾಯವಾಗುತ್ತಿರುವ ಕುರಿತು ಪರಿಶೀಲಿಸಲು ಮತ್ತು NEP ಪ್ರಕಾರ ವಿದ್ಯಾರ್ಥಿಗಳಿಗೆ Online ಪಾಠ ಮಾಡಬೇಕಾಗಿರುವುದರಿಂದ ಅದಕ್ಕಾಗಿ ಅಗತ್ಯವಾದ ಪೂರಕ ಸೌಲಭ್ಯಗಳನ್ನು ಒದಗಿಸಲು ಕ್ರಮ ವಹಿಸಬೇಕೆಂದು ತಿಳಿಸಿದರು.

ಸದಸ್ಯರಾದ ಡಾ. ಗುರುನಾಥರಾವ್ ವೈದ್ಯರವರು ಅಂತರಾಷ್ಟ್ರೀಯ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿರುವ ಹಿನ್ನಲೆಯಲ್ಲಿ ಅವರಿಗೆ ವಿಧಿಸುವ ಶುಲ್ಕವನ್ನು ಪರಿಷ್ಕರಿಸಿ ಕಡಿಮೆಗೊಳಿಸಬೇಕೆಂದು ತಿಳಿಸಿದರು.

ಸದಸ್ಯರಾದ ಡಾ. ವಿ. ಆರ್. ದೇವರಾಜ್‌ರವರು Indian Council for Cultural Relations (ICCR Portal) ನಲ್ಲಿ ಈ ವಿಶ್ವವಿದ್ಯಾನಿಲಯವನ್ನು ಪ್ರಸ್ತುತ ಪಡಿಸಲು ಸಂಬಂಧಿಸಿದವರಿಗೆ ಪತ್ರ ಬರೆಯಬೇಕೆಂದು ತಿಳಿಸಿದರು ಅದೇ ರೀತಿ All India Council for Technical Education (AICTE)ಯಲ್ಲಿ ಜಾಲತಾಣದಲ್ಲಿ ವಿಶ್ವವಿದ್ಯಾನಿಲಯದ ಹೆಸರನ್ನು ಸೇರಿಸಲು ವಿನಂತಿಸಬೇಕೆಂದು ಹೇಳಿದರು.

**ಸಿಂಡಿಕೇಟ್ ತೀರ್ಮಾನ:**

**ಅ) 2022-23ನೇ ಶೈಕ್ಷಣಿಕ ಸಾಲಿಗೆ ವಿವಿಧ ಮಹಾವಿದ್ಯಾನಿಲಯಗಳ ಸಂಯೋಜನೆಗಾಗಿ ಅಧಿಸೂಚನೆ ಹೊರಡಿಸಿರುವ ಕ್ರಮಕ್ಕೆ ಅನುಮೋದನೆ ನೀಡಲಾಯಿತು.**

**ಆ) 2022-23ನೇ ಸಾಲಿನ ಸಂಯೋಜನಾ ಶುಲ್ಕವನ್ನು 2019-20ನೇ ಸಂಯೋಜನಾ ಶುಲ್ಕಕ್ಕೆ 10% ಹೆಚ್ಚಿಸಿ ಅಧಿಸೂಚನೆ ಹೊರಡಿಸಿರುವ ಕ್ರಮವನ್ನು ಅನುಸಮರ್ಥಿಸಲಾಯಿತು.**

**ಇ) 2022-23ನೇ ಸಾಲಿಗೆ ವಿವಿಧ ಮಹಾವಿದ್ಯಾನಿಲಯಗಳ ತನಿಖೆಗಾಗಿ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ಸಭೆ ತೀರ್ಮಾನಿಸಿತು.**

**ಈ) ವಿಶ್ವವಿದ್ಯಾನಿಲಯದ ವಿವಿಧ ಪ್ರಕಾರದ ಶುಲ್ಕಗಳನ್ನು ಪರಿಷ್ಕರಿಸಲು ಕುಲಸಚಿವರ ಅಧ್ಯಕ್ಷತೆಯಲ್ಲಿ, ಕುಲಸಚಿವರು(ಮೌಲ್ಯಮಾಪನ), ಹಣಕಾಸು ಅಧಿಕಾರಿಗಳು, ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ ಸದಸ್ಯರನ್ನು ಒಳಗೊಂಡಂತೆ ಸಮಿತಿ ರಚಿಸಲು ಕುಲಪತಿಗಳಿಗೆ ಅಧಿಕಾರ ನೀಡಲು ಸಭೆ ತೀರ್ಮಾನಿಸಿತು.**

**ವಿಷಯಸಂಖ್ಯೆ 6:** Disposal of scrap and unserviceable materials lying inside the campus of Bengaluru City University, Bengaluru

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಬೆಂಗಳೂರು ನಗರ ವಿಶ್ವವಿದ್ಯಾಲಯದ ಕ್ಯಾಂಪಸ್ ಪುನರಾಭಿವೃದ್ಧಿ ಯೋಜನೆಯ ಅನುಷ್ಠಾನದ ಸಮಯದಲ್ಲಿ ಹಳೆಯ ಹೆಂಚಿನ ಮೇಲ್ಛಾವಣಿ, ಹಳೆಯ ಕಟ್ಟಡಗಳು ಮತ್ತು ಹಳೆಯ ಎ.ಸಿ ಶೀಟಿನ ಗ್ಯಾರೇಜು, ಮತ್ತು ಪ್ರಸನ್ನ ಕುಮಾರ ಬ್ಲಾಕ್‌ನಲ್ಲಿರುವ ಹಳೆಯ ಸ್ಟುಡಿಯೋವನ್ನು ಕೆಡವಿರುತ್ತಾರೆ.

ಗಣಿತ ವಿಭಾಗ ಕಟ್ಟಡದ ಹಿಂಭಾಗದಲ್ಲಿರುವ ಎ.ಸಿ ಶೀಟ್ ಛಾವಣಿಯ ಕ್ಯಾಂಟೀನ್ ಕಟ್ಟಡವನ್ನು ಸಹಾ ಕೆಡವಿರುತ್ತಾರೆ ಹಾಗೂ ಜ್ಞಾನ ಜ್ಯೋತಿ ಸಭಾಂಗಣದಲ್ಲಿ ಹಳೆಯ ಬಳಕೆಯಲ್ಲಿಲ್ಲದ HVAC ವ್ಯವಸ್ಥೆಯನ್ನು ಕಿತ್ತುಹಾಕಿರುತ್ತಾರೆ.

ಈ ಕಿತ್ತುಹಾಕಿರುವ, ಹಳೆಯ, ಬಳಕೆಯಲ್ಲಿಲ್ಲದ ವಸ್ತುಗಳನ್ನು ಸಿ.ಬಿ.ಎಸ್.ಎಮ್.ಎಸ್ ಕಟ್ಟಡದ ಹಿಂಭಾಗದಲ್ಲಿ ಮತ್ತು ಪ್ರಸನ್ನ ಕುಮಾರ ಬ್ಲಾಕ್‌ನಲ್ಲಿ ಜೋಡಿಸಲಾಗಿದೆ.

ವಿಲೇವಾರಿ ಮಾಡಬೇಕಾಗಿರುವ ವಸ್ತುಗಳ ವಿವರಗಳು ಈ ಕೆಳಕಂಡಂತಿದೆ:

1. Damaged, Obsolete and old wooden chairs
2. Damaged, Obsolete and old steel chairs
3. Damaged, Obsolete and old steel almirah
4. Damaged, Obsolete and old wooden reapers
5. Damaged, Obsolete and old wooden logs
6. Damaged, Obsolete and old aluminum materials
7. Damaged, Obsolete and old wooden tables
8. Damaged, Obsolete and old weld mesh
9. Damaged, Obsolete and old mangalore tiles
10. Damaged, Obsolete and old wooden chairs
11. Damaged, Obsolete and old wooden windows
12. Damaged, Obsolete and old truss, steel materials
13. Damaged, Obsolete and old A/C sheets

ಆದುದರಿಂದ ಕೆ.ಟಿ.ಪಿ.ಪಿ ನಿಯಮಗಳ ಪ್ರಕಾರ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಬಳಕೆಗೆ ಬಾರದ ವಸ್ತುಗಳನ್ನು ವಿಲೇವಾರಿ ಮಾಡಲು ಟೆಂಡರ್ ಆಹ್ವಾನಿಸಲು ಅನುಮೋದನೆ ಕೋರಲಾಗಿದೆ.

**ಸಿಂಡಿಕೇಟ್ ತೀರ್ಮಾನ:**

**ಅನುಪಯುಕ್ತ ಸಾಮಗ್ರಿ , ಪೀಠೋಪಕರಣ ಯಂತ್ರಗಳನ್ನು ವಿಲೇವಾರಿ ಮಾಡಲು ಕರ್ನಾಟಕ (ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ) ಅಧಿನಿಯಮದ ಪ್ರಕಾರ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.**

**Item No-7:-** Procurement of Blazers, Track suits, Tie Shoes etc., for the Sports participants in South Zone and All India Inter University Tournaments.

**Reference Note:**

The Sports persons representing the University in the South Zone and All India Inter University tournaments have to be provided with the Sports kit, containing Blazers, Track Suit, Tie & Shoe. During 2018-19 efforts were made for e-procurement of sports kit. However the only agency qualified in the tender could not fulfill the stipulations and hence dropped.

The sports and athletic teams of Bengaluru City University are regularly participating in the South Zone and all India Inter University Tournaments during the years 2018-19 & 2019-20. Due to covid pandemic sports activities were not conducted during 2020-21. Again during 2021-22 the University team participated in the said tournaments and won the medals. It is pertinent to mention that the University teams have won Hockey championship in South Zone and Khelo India tournaments other athletes and teams have also qualified and won medals.

In view of this, the sports persons who have participated in the South Zone and All India Inter University Tournaments of 2018-19, 2019-20, 2021-22 are to be provided with the Sports Kit consisting of Blazers, Track Suits, Tie and Shoes etc. In addition to this the Trophies and Medals for awarding to the winners in inter college tournaments are to be procured. Hence short term tenders are to be invited for procurement of following sports kit and equipments.

| Sl.No | Particular | Required Quantity for 2021-22 | Approximate Unit Cost | Amount |
|---|---|---|---|---|
| 1. | Jersey Shorts | 600 | 600 | 3,60,000 |
| 2. | Track Suits | 600 | 1, 200 | 7,20,000 |
| 3. | Shoes | 600 | 1, 000 | 6,00,000 |
| 4. | Blazers | 600 | 2,000 | 12,00,000 |
| 5. | Tie | 600 | 200 | 1,20,000 |
| | | | Total | 30,00,000 |

Further the Trophies and Medals are to be procured for presenting the winner and runners of Inter Collegiate events. Budget provision of Rs. 30.00 lakh made and head of A/c

No. 4-12-054-154 supply of Uniform, Blazers and Rs. 25.00 lakh made head of A/c No. 4-12-054-158 purchase of Sports materials.

Hence the matter is placed before the Syndicate for procurement of above sports kit for the Sports persons of 2018-19, 2019-20 and 2021-22 after following the provisions of KTPP Act.

ಸಿಂಡಿಕೇಟ್ ತೀರ್ಮಾನ:

**ಪ್ರಸ್ತಾವನೆಗೆ ಅನುಮೋದನೆ ನೀಡಲಾಯಿತು. KTPP ಅಧಿನಿಯಮದ ಪ್ರಕಾರ, 2018–19, 2019–20 ಹಾಗೂ 2021–22ನೇ ಸಾಲಿನ ಕ್ರೀಡಾ ಪಟುಗಳಿಗೆ ಅಗತ್ಯವಾದ** Blazers, Track Suits, Shoes, Jersey Shorts **ಇತ್ಯಾದಿಗಳನ್ನು ಖರೀದಿ ಪ್ರಕ್ರಿಯೆ ಕೈಗೊಳ್ಳಲು ಸೂಚಿಸಲಾಯಿತು.**

**ವಿಷಯ ಸಂಖ್ಯೆ** 8: ಜ್ಞಾನಜ್ಯೋತಿ ಸಭಾಂಗಣ ಮತ್ತು ಸೆಮಿನಾರ್ ಹಾಲ್‌ನ ಬಾಡಿಗೆ ದರಗಳನ್ನು ಪರಿಷ್ಕರಿಸುವ ಬಗ್ಗೆ.

ಜ್ಞಾನಜ್ಯೋತಿ ಸಭಾಂಗಣದಲ್ಲಿ ಇತ್ತೀಚೆಗೆ ಮೂಲಭೂತ ಸೌಕರ್ಯಗಳ ಜೊತೆ ಬೋರ್ಡ್‌ರೂಂ, ಸೆಮಿನಾರ್ ಹಾಲ್, ಸಭಾಂಗಣ, ಹವಾನಿಯಂತ್ರಿತ ವ್ಯವಸ್ಥೆ, ಜನರೇಟರ್ ವ್ಯವಸ್ಥೆಗಳನ್ನು ನವೀಕರಿಸಲಾಗಿದೆ ಹಾಗೂ ವಿದ್ಯುತ್, ನೀರು, ಭದ್ರತಾ ವ್ಯವಸ್ಥೆ, ಸ್ವಚ್ಛತಾ ವ್ಯವಸ್ಥೆಗಳ ದರಗಳು ಹಾಗೂ ಇತರೆ ಸೇವೆಗಳ ದರಗಳು ಇತ್ತೀಚೆಗೆ ಗಣನೀಯವಾಗಿ ಹೆಚ್ಚಳವಾಗಿದೆ. ಇದರಿಂದ ಸಭಾಂಗಣದ ನಿರ್ವಹಣೆಗೆ ಆರ್ಥಿಕ ಸಂಪನ್ಮೂಲಗಳ ಕೊರತೆಯಾಗಲಿದೆ.

ಹೀಗಾಗಿ ಸಭಾಂಗಣ ಮತ್ತು ಸೆಮಿನಾರ್ ಹಾಲ್‌ಗಳ ಬಾಡಿಗೆ ದರಗಳನ್ನು ಈಗಿರುವ ದರಗಳಿಗಿಂತ ಅಂದಾಜು ಶೇಕಡಾ 10 ರಷ್ಟು ಹೆಚ್ಚಿಸಿ ಅನಿವಾರ್ಯವಾಗಿ ದರಗಳನ್ನು ಪರಿಷ್ಕರಿಸಬೇಕಾಗಿದೆ. ಪ್ರಸ್ತುತ ಬೆಂಗಳೂರು ವಿಶ್ವವಿದ್ಯಾಲಯವು ಈ ಹಿಂದೆ ನಿಗದಿಗೊಳಿಸಿದ ದರಗಳಿಗೆ ದಿನಾಂಕ: 19.01.2019 ರಂದು ನಡೆದ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿರುವುದರ ಮೇರೆಗೆ ಪ್ರಸ್ತುತವಾಗಿ ದರಗಳನ್ನು ಜಾರಿಗೊಳಿಸಲಾಗಿದೆ.

ಈಗ ಜ್ಞಾನಜ್ಯೋತಿ ಸಭಾಂಗಣ ಹಾಗೂ ಸೆಮಿನಾರ್ ಹಾಲ್‌ನ ಬಾಡಿಗೆ ದರಗಳನ್ನು ಕೆಳಗಿನಂತೆ ನಿಗದಿಗೊಳಿಸಲು ಈ ವಿಷಯಗಳನ್ನು ಸಿಂಡಿಕೇಟ್ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

| ಕ್ರ.ಸಂ. | | ಪ್ರಸ್ತುತ ದರಗಳು | ಪ್ರಸ್ತಾಪಿಸಲಾಗಿರುವ ಪರಿಷ್ಕರಿಸಬೇಕಾದ ದರಗಳು |
|---|---|---|---|
| 1 | ಜ್ಞಾನಜ್ಯೋತಿ ಸಭಾಂಗಣ | (ಒಂದು ದಿನಕ್ಕೆ)<br>ರೂ.93,000+18% GST<br>ರೂ. 1,09,740 | (ಒಂದು ದಿನಕ್ಕೆ)<br>ರೂ.1,25,000+GST 18% 22,500<br>ರೂ. 1,47,500 |
| 2 | ಸೆಮಿನಾರ್ ಹಾಲ್ | ರೂ.25,000+18% GST<br>ರೂ.29,500 | ರೂ.30,000+18% GST 5,400<br>ರೂ.35,400 |

ಸಿಂಡಿಕೇಟ್ ತೀರ್ಮಾನ:

ಪ್ರಸ್ತಾವನೆಗೆ ಅನುಮೋದನೆ ನೀಡಿ, ಜ್ಞಾನಜ್ಯೋತಿ ಸಭಾಂಗಣ ಪ್ರತಿ ದಿನಕ್ಕೆ ರೂ. 1,25,000+ GST 18% ರೂ. 22,500 ಒಟ್ಟು 1,47,500.00ಗಳ ಬಾಡಿಗೆ ನಿಗಧಿಪಡಿಸಲು ಮತ್ತು ಸೆಮಿನಾರ್ ಹಾಲ್‌ಗೆ ರೂ. 30,000.00 + GST 18% ರೂ. 5,400.00 ಒಟ್ಟು 35,400.00ಗಳನ್ನು ಬಾಡಿಗೆ ನಿಗಧಿಪಡಿಸಲು ಸಭೆ ತೀರ್ಮಾನಿಸಿತು.

ಶಿಕ್ಷಣ ಸಂಸ್ಥೆಗಳು, ರಾಜ್ಯಸರ್ಕಾರ/ಕೇಂದ್ರ ಸರ್ಕಾರದ ಇಲಾಖೆಗಳು, ಇತರೆ ವಿಶ್ವವಿದ್ಯಾನಿಲಯಗಳ ಆಯೋಜಿಸುವ ಕಾರ್ಯಕ್ರಮಗಳಿಗೆ ಮಾರ್ಗದರ್ಶನಗಳ ಪ್ರಕಾರ ಪರಿಗಣಿಸಿ ರಿಯಾಯಿತಿ ನೀಡಲು ಕುಲಪತಿಗಳಿಗೆ ಅಧಿಕಾರ ನೀಡಲು ಸಭೆ ತೀರ್ಮಾನಿಸಿತು.

ವಿಷಯ ಸಂಖ್ಯೆ– 9 : 2022–23 ನೇ ಶೈಕ್ಷಣಿಕ ಸಾಲಿನಿಂದ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಪದವಿ ವ್ಯಾಸಂಗ ಪ್ರಾರಂಭಿಸಲು ಅವಶ್ಯಕವಾದ ಭೌತಿಕ ಹಾಗೂ ಮಾನವ ಸಂಪನ್ಮೂಲಗಳ ಪ್ರಸ್ತಾವನೆಯನ್ನು ಅನುಮೋದಿಸುವ ಕುರಿತು.

ರಾಜ್ಯ ಸರ್ಕಾರ ಅನುಷ್ಠಾನಗೊಳಿಸಿರುವ ರಾಷ್ಟೀಯ ಶಿಕ್ಷಣ ನೀತಿ 2020 ರ ಶಿಫಾರಸ್ಸುಗಳನ್ನು, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಅಳವಡಿಸಿಕೊಂಡು ಅದರ ಪ್ರಕಾರ ಬಹು–ಶಿಸ್ತೀಯ ಏಕೀಕೃತ ಸ್ನಾತಕ ಮತ್ತು ಸ್ನಾತಕೋತ್ತರ ವ್ಯಾಸಂಗಗಳನ್ನು 2021–22 ನೇ ಸಾಲಿನಿಂದ ಪ್ರಾರಂಭಿಸಲಾಗಿದೆ. ಸರ್ಕಾರ ಸಿದ್ಧಪಡಿಸಿದ ಮಾದರಿ ವಿನಿಯಮಗಳ ಅಡಿಯಲ್ಲಿ ವಿಶ್ವವಿದ್ಯಾನಿಲಯ ರಚಿಸಲಾದ ಕರಡು ವಿನಿಯಮಗಳಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ರ ಅನುಚ್ಛೇದ 44(2) ಪ್ರಕಾರ ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆ ಪಡೆಯಲಾಗಿದೆ. ಸದರಿ ವಿನಿಯಮಗಳ ಪ್ರಕಾರ ವಿಶ್ವವಿದ್ಯಾನಿಲಯದಲ್ಲಿ ಪದವಿ ಹಂತದ ವ್ಯಾಸಂಗಗಳನ್ನು ಪ್ರಾರಂಭಿಸುವುದು ಅನಿವಾರ್ಯವಾಗಿದೆ.

ಈ ಹಿನ್ನೆಲೆಯಲ್ಲಿ, ದಿನಾಂಕ 17.12.2021 ರಂದು ಜರುಗಿದ ಸಿಂಡಿಕೇಟ್ ಸಭೆ ಈ ಕುರಿತು ರೂಪುರೇಷೆಗಳನ್ನು ಸಿದ್ಧಪಡಿಸಲು ಕುಲಪತಿಗಳ ಅಧ್ಯಕ್ಷತೆಯಲ್ಲಿ ಒಂದು ಸಲಹಾ ಸಮಿತಿಯನ್ನು ರಚಿಸಬೇಕೆಂದು ತೀರ್ಮಾನಿಸಿತು. ಸದರಿ ನಿರ್ಣಯದ ಪ್ರಕಾರ ಕುಲಪತಿಗಳ ಅಧ್ಯಕ್ಷತೆಯಲ್ಲಿ, ವಿಷಯ ತಜ್ಞರು, ವಿಶ್ವವಿದ್ಯಾನಿಲಯದ ಡೀನರು, ವಿವಿಧ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು, ಕುಲಸಚಿವರು, ಕುಲಸಚಿವರು(ಮೌಲ್ಯಮಾಪನ) ಮತ್ತು ವಿತ್ತಾಧಿಕಾರಿಗಳು ಮುಂತಾದ ಸದಸ್ಯರೊಳಗೊಂಡು ರಚಿಸಲಾದ ಸಮಿತಿ ದಿನಾಂಕ 07.02.2022 ರಂದು ಸಭೆ ಸೇರಿ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಸ್ನಾತಕ ವ್ಯಾಸಂಗ ಪ್ರಾರಂಭಿಸಲು ಅವಶ್ಯಕವಾದ ಭೌತಿಕ ಹಾಗೂ ಮಾನವ ಸಂಪನ್ಮೂಲಗಳ ವಿವರಗಳನ್ನು ಸಂಬಂಧಿಸಿದ ವಿಭಾಗಗಳು ಸಲ್ಲಿಸುವಂತೆ ಸೂಚಿಸಲಾಯಿತು. ಅದರಂತೆ ವಿಭಾಗಗಳು ಸಲ್ಲಿಸಿರುವ ಮಾಹಿತಿಯನ್ನು ದಿನಾಂಕ 27.04.2022 ರಂದು ಜರುಗಿದ ಸಲಹಾ ಸಮಿತಿಯ ಸಭೆಯಲ್ಲಿ ಮಂಡಿಸಲಾಯಿತು.

2022–23 ನೇ ಶೈಕ್ಷಣಿಕ ಸಾಲಿನಿಂದ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಪದವಿ ವ್ಯಾಸಂಗ ಪ್ರಾರಂಭಿಸಲು ಅವಶ್ಯಕವಾದ ಭೌತಿಕ ಹಾಗೂ ಮಾನವ ಸಂಪನ್ಮೂಲಗಳ ಕುರಿತಂತೆ ಮಾಡಲಾದ ಸಲಹಾ ಸಮಿತಿ ಶಿಫಾರಸ್ಸು ಕೆಳಗಿನಂತಿದೆ:

1. **ಪ್ರಾರಂಭಿಸಬೇಕಾದ ವ್ಯಾಸಂಗಗಳು:**

| Sl. No. | Courses | Subjects |
|---|---|---|
| 1. | Languages common to all Courses | Kannada, English, Hindi, Sanskrit. |
| 2. | BA Integrated (Honors) as per NEP | **Discipline Specific subjects**: Kannada, English, Communicative English, Journalism and Communication, History, Economics, Political Science, Sociology, French |
| 3. | BSW Integrated (Honors) as per NEP | Stand alone subjects – As per approved Syllabus |
| 4. | B.Com. Integrated (Honors) as per NEP | i. B.Com (Regular)<br>ii. B.Com (Finance and Accounting),<br>iii. B.Com (Business Data Analytics), |
| 5. | BBA | Stand alone subjects – As per approved Syllabus |
| 6. | BVA | Fine Arts. Visual Arts ( Animation & Graphic Design) |
| 7. | B.Sc. Integrated (Honors) as per NEP | **Discipline Specific subjects** : Biochemistry, Botany, Chemistry, Computer Science, Electronics, Environment & Climate Change, Physics, Mathematics, Zoology, Fashion & Apparel Design and Interior Design |

2. **<u>ಭೌತಿಕ ಅವಶ್ಯಕತೆಗಳು:</u>**

ಪ್ರಥಮ ವರ್ಷದಲ್ಲಿ ಪ್ರತಿ ವಿಷಯಕ್ಕೆ ಒಂದು ತರಗತಿ ಕೊಠಡಿಯಂತೆ ಒಟ್ಟು 20ಕೊಠಡಿಗಳ ಹಾಗೂ ವಿಜ್ಞಾನ ವಿಷಯಗಳಿಗೆ 9 ಪ್ರಯೋಗಾಲಯ ಕೊಠಡಿಗಳು ಅಗತ್ಯವಿರುವುದನ್ನು ಸಭೆಗೆ ತಿಳಿಸಲಾಯಿತು. ಸಧ್ಯಕ್ಕೆ – ವಾಣಿಜ್ಯ, ಎಂ.ಬಿ.ಎ ಮತ್ತು ವಿದೇಶಿ ಭಾಷೆಗಳ ವಿಭಾಗಗಳು ತಮ್ಮ ಕಟ್ಟಡಗಳಲ್ಲಿ ಪ್ರಥಮ ವರ್ಷದ ತರಗತಿಗಳನ್ನು ಪ್ರಾರಂಭಿಸಲು ಕೊಠಡಿಗಳನ್ನು ಗುರುತಿಸಬೇಕೆಂದು ತೀರ್ಮಾನಿಸಲಾಯಿತು. ರಸಾಯನಶಾಸ್ತ್ರ, ಜೀವರಸಾಯನಶಾಸ್ತ್ರ, ಕಂಪ್ಯೂಟರ್ ವಿಜ್ಞಾನ, ಭೌತಶಾಸ್ತ್ರ, ಗಣಿತಶಾಸ್ತ್ರ, ವಿಭಾಗಗಳು– ಆಯಾ ವಿಭಾಗಗಳ ಸ್ನಾತಕ ವ್ಯಾಸಂಗಕ್ಕಾಗಿ ಅಗತ್ಯ ಸ್ಥಳಾವಕಾಶವನ್ನು ಮಾಡಿಕೊಡಬೇಕೆಂದು ತೀರ್ಮಾನಿಸಲಾಯಿತು.

ಉಳಿದ ವಿಭಾಗಗಳಿಗೆ ಗ್ರಂಥಾಲಯದ ಕೆಳಮಹಡಿ(cellar), ಹಿಂದಿನ ಕಾನೂನು ಕಾಲೇಜು ಮತ್ತು ವಿದ್ಯಾರ್ಥಿನಿಲಯದ ವಸತಿ ಗೃಹಗಳನ್ನು ನವೀಕರಿಸಿ ಅಲ್ಲಿ ಸ್ಥಳಾವಕಾಶ ಮಾಡಬೇಕೆಂದು ತೀರ್ಮಾನಿಸಲಾಯಿತು.

ಈ ಕುರಿತು ಸಂಯೋಜಕರು ಕುಲಸಚಿವರೊಂದಿಗೆ ಚರ್ಚಿಸಿ ಸ್ಥಳಗಳನ್ನು ಗುರುತಿಸಿ ಅವುಗಳ ಅಗತ್ಯ ನಾಮಫಲಕಗಳನ್ನು ಹಾಕಿಸುವ ಕೆಲಸ ಮಾಡಬೇಕೆಂದು ಸ್ನಾತಕ ವ್ಯಾಸಂಗಗಳ ಸಂಯೋಜಕರು ಪ್ರಾಚಾರ್ಯರಾಗಿಯೂ ಕಾರ್ಯ ನಿರ್ವಹಿಸಬೇಕಾಗಿರುವುದರಿಂದ ಕಛೇರಿಗಾಗಿ ಒಂದು ಸ್ಥಳ ಸಹ ಗುರುತಿಸಲು ಸೂಚಿಸಲಾಯಿತು.

3. <u>ಬೋಧಕ ಸಿಬ್ಬಂಧಿಗಳು:</u>

ಒಟ್ಟು 5 ವರ್ಷಗಳ ಸಂಯೋಜಿತ ವ್ಯಾಸಂಗವಾಗಿದ್ದು ಈಗಾಗಲೇ ಸ್ನಾತಕೋತ್ತರ ವ್ಯಾಸಂಗದ ಹುದ್ದೆಗಳನ್ನು ಗಮನದಲ್ಲಿಟ್ಟುಕೊಂಡು ಉಳಿದ ಮೂರು ವರ್ಷಗಳಿಗೆ ಅಗತ್ಯವಾದ ಕೆಳಕಂಡ ಹುದ್ದೆಗಳ ಸೃಜನೆಗೆ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಲಾಯಿತು.

**a) Assistant Professors – Arts Faculty**

| Sl. No | Subjects | Total no. of posts requirement | No. of posts required for 2022-23 |
|---|---|---|---|
| 1. | Kannada, | 04 | 02 |
| 2. | English, | 04 | 02 |
| 3. | Hindi | 02 | 01 |
| 4. | Sanskrit | 02 | 01 |
| 5. | Foreign Languages: (French, German) | 02 | 02 |
| 6. | Communicative English, | 03 | 02 |
| 7. | History | 06 | 02 |
| 8. | Economics | 06 | 02 |
| 9. | Political Science | 06 | 02 |
| 10. | Sociology | 06 | 02 |
| 11. | Journalism & Communication | 06 | 02 |
| 12. | Visual Arts (4 specializations) | 08 | 04 |
| | **Total Arts Faculty** | **55** | **24** |

**b) Assistant Professors – Commerce Faculty**

| Sl. No | Subjects | Total no. of posts requirement | No. of posts required for the 2022-23 |
|---|---|---|---|
| 1. | B.Com.(Regular) | 06 | 04 |
| 2. | B.Com.(Finance & Accounting), | 06 | 04 |
| 3. | B.Com. (Business Data Analytics), | 06 | 04 |
| 4. | BBA | 06 | 04 |
| | **Total Commerce Faculty** | **24** | **16** |

**c) Assistant Professors – Science Faculty**

| Sl. No | Subjects | Total no. of posts requirement | No. of posts required for the 2022-23 |
|---|---|---|---|
| 1. | Biochemistry, | 06 | 02 |
| 2. | Botany | 06 | 02 |
| 3. | Chemistry, | 06 | 02 |
| 4. | Computer Science | 06 | 02 |
| 5. | Electronics, | 06 | 02 |
| 6. | Environment & Climate Change | 06 | 02 |
| 7. | Apparel Design, | 06 | 02 |
| 8. | Interior Design | 06 | 02 |
| 9. | Mathematics, | 06 | 02 |
| 10. | Physics, | 06 | 02 |
| 11. | Zoology, | 06 | 02 |
| | **Total Science** | **66** | **22** |

4. ಬೋಧಕೇತರ ಸಿಬ್ಬಂದಿ

| Sl. No. | Non Teaching Positions | Total no. of posts requirement | No. of posts required for the 2022-23 |
|---|---|---|---|
| 1. | Co-ordinator for UG Courses –cum Principal | 01 | 01 |
| 2. | Office Superintendent | 01 | 01 |
| 3. | Junior Assistants/DEO | 23 | 12 |
| 4. | Group-D | 23 | 12 |
| 5. | House Keeping | 10 | 06 |
| 6. | Lab Assistants | 10 | 06 |
| | **Total** | **68** | **38** |

5. ಉಪಕರಣಗಳು ಮತ್ತು ಪೀಠೋಪಕರಣಗಳು

| Sl. No | Items | Quantity per Department | Total No. of Depts. | Total Requirement |
|---|---|---|---|---|
| | **i) Furniture**: | | | |
| 1. | Desks for students | 20 | 22 | 440 |
| 2. | Table & Chair for teachers | 02 | 22 | 44 |
| 3. | Almirah | 01 | 22 | 22 |
| 4. | Computer Chair | 01 | 22 | 22 |
| 5. | Office Table | 01 | 22 | 22 |
| 6. | Computer Table | 01 | 22 | 22 |
| 7. | File Storage Cabinet | 01 | 22 | 22 |
| | **ii) Lab. Furniture** | | | |
| 8. | Working Table - 4'x8' | 04 | 10 | 40 |
| 9. | Cupboard - 4x8' | 02 | 05 | 10 |
| 10. | Sitting Stools | 30 | 10 | 300 |
| 11. | Table & Chair | 1+1 | 10 | 20 |
| 12. | Racks on working table | 15 | 05 | 75 |
| 13. | Storage racks | 01 | 10 | 10 |
| | **iii) Digital Infrastructure**. | | | |
| 14. | All in one Computer | 01 | 22 | 22 |
| 15. | Printer | 01 | 22 | 22 |
| 16. | LCD Projectors | 01 | 22 | 22 |
| 17. | Interactive Boards | 01 | 22 | 22 |
| | **iv) Library facilities** | | | |
| 18. | Glass Shelf | 01 | 22 | 22 |
| 19. | Book Racks | 01 | 22 | 22 |
| 20. | Reading Table | 02 | 22 | 44 |
| 21. | Reading Chairs: | 04 | 22 | 88 |
| 22. | Print & Digital Reprographic Equipments (for Library) | 02 | - | 02 |
| | **v) Laboratory Equipments** | | | |

| 23. | Electronic Equipments | - | 10 | 10 |
|---|---|---|---|---|
| 24. | Chemicals and Glass wares | - | 05 | 05 |
| 25. | Lab Equipments | - | 10 | 10 |
| 26. | Refrigerator | - | 10 | 10 |

6. ಆಯವ್ಯಯದ ವಿವರಗಳು:

**Abstract Budget Requirement**

| Expenditure Details | Financial implications per annum (in lakhs) | Remarks |
|---|---|---|
| **Recurring Expenditure:** Salary Component for Teaching Faculty Staff | **7, 18, 32,520** | **Calculated as per minimum of the pay scale** |
| Salary Component for Adm. & Supporting Staff | **2,86,10,856** | |
| **Total** | **10,04,43,376** | |
| **Non- Recurring Expenditure** | | |
| Budget requirement for infrastructure | **3,24,45,000** | |
| **Grand Total** | **13,28,88,376** | |

2022–23 ನೇ ಶೈಕ್ಷಣಿಕ ಸಾಲಿನಿಂದ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಲ್ಲಿ ಪದವಿ ವ್ಯಾಸಂಗ ಪ್ರಾರಂಭಿಸಲು ಅವಶ್ಯಕವಾದ ಭೌತಿಕ ಹಾಗೂ ಮಾನವ ಸಂಪನ್ಮೂಲಗಳ ಕುರಿತು ರಚಿಸಲಾದ ಸಮಿತಿ ಸಲ್ಲಿಸಿರುವ ಮೇಲಿನ ವರದಿಯಲ್ಲಿ ಆವರ್ತಕ ವೆಚ್ಚವನ್ನು ಅತಿಥಿ ಉಪನ್ಯಾಸಕರಿಗೆ ನೀಡುವ ಸಂಭಾವನೆ ಆಧಾರದ ಮೇಲೆ ಲೆಕ್ಕ ಹಾಕಿದಲ್ಲಿ 62 ಅತಿಥಿ ಉಪನ್ಯಾಸಕರಿಗೆ ವಾರ್ಷಿಕ ಸಂಭಾವನೆ ₹3,72,00,000/- ಮತ್ತು ಪೀಠೋಪಕರಣಗಳಿಗೆ ಅನಾವರ್ತಕ ವೆಚ್ಚ ₹3,24,45,000/- ಒಟ್ಟು ₹6,96,45,000/- ಗಳಾಗುತ್ತವೆ.

ಬೆಂಗಳೂರು ವಿಶ್ವವಿದ್ಯಾಲಯ, ಕಾಲೇಜು ಶಿಕ್ಷಣ ಇಲಾಖೆ ಮತ್ತು ಬೆಂಗಳೂರು ನಗರ ವಿಶ್ವವಿದ್ಯಾನಿಲಯ ನಿಗದಿಪಡಿಸಿದ ಅತಿಥಿ ಉಪನ್ಯಾಸಕರ ಸಂಭಾವನೆ ದರಗಳ ತುಲನಾತ್ಮಕ ಪಟ್ಟಿ ಕೆಳಕಂಡಂತೆ ಇರುತ್ತವೆ.

| ಅತಿಥಿ ಉಪನ್ಯಾಸಕರ ವಿವರ | ಬೆಂಗಳೂರು ವಿಶ್ವವಿದ್ಯಾಲಯ ನಿಗದಿ ಪಡಿಸಿರುವ ಸಂಭಾವನೆ | ಕಾಲೇಜು ಶಿಕ್ಷಣ ಇಲಾಖೆ ನಿಗದಿ ಪಡಿಸಿರುವ ಸಂಭಾವನೆ | ಬೆಂಗಳೂರು ನಗರ ವಿಶ್ವವಿದ್ಯಾನಿಲಯ ನಿಗದಿ ಪಡಿಸಿರುವ ಸಂಭಾವನೆ |
|---|---|---|---|
| NET/ SLET/Ph.D ಪದವಿ ಹೊಂದಿರುವ ಅತಿಥಿ ಉಪನ್ಯಾಸಕರು | ರೂ.780/ ಪ್ರತಿ ಗಂಟೆಗೆ ಗರಿಷ್ಠ ರೂ.49,920/– | ರೂ. 32,000/– (5 ವರ್ಷ ಅನುಭವ ಹೊಂದಿದ ಉಪನ್ಯಾಸಕರಿಗೆ)<br><br>ರೂ. 30,000/– (5 ವರ್ಷಕ್ಕಿಂತ ಕಡಿಮೆ ಅನುಭವ ಹೊಂದಿದ ಉಪನ್ಯಾಸಕರಿಗೆ) | ರೂ. 1,250/ ಪ್ರತಿ ಗಂಟೆಗೆ ಗರಿಷ್ಠ ರೂ. 50,000/– |
| NET/ SLET/Ph.D ಇಲ್ಲದಿರುವ ಅತಿಥಿ ಉಪನ್ಯಾಸಕರು | ರೂ. 680/ ಪ್ರತಿ ಗಂಟೆ ಗರಿಷ್ಠ ರೂ. 43,520/– | ರೂ. 28,000/– (5 ವರ್ಷ ಅನುಭವ ಹೊಂದಿದ ಉಪನ್ಯಾಸಕರಿಗೆ)<br><br>ರೂ. 26,000/– (5 ವರ್ಷಕ್ಕಿಂತ ಕಡಿಮೆ ಅನುಭವ ಹೊಂದಿದ ಉಪನ್ಯಾಸಕರಿಗೆ) | ರೂ. 750 / ಪ್ರತಿ ಗಂಟೆ ಗರಿಷ್ಠ ರೂ. 40,000/– |

ಪ್ರಸ್ತುತ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ NET/ SLET/Ph.D ಪದವಿ ಹೊಂದಿದ ಅತಿಥಿ ಉಪನ್ಯಾಸಕರು ಪ್ರತಿ ಗಂಟೆಗೆ ರೂ. 1,250/- ರಂತೆ, ಗರಿಷ್ಠ ರೂ. 50,000/- ಗಳನ್ನು ನಿಗದಿಪಡಿಸಿ ವಾರಕ್ಕೆ 16 ಗಂಟೆಗಳ ಪಾಠ ಪ್ರವಚನ ನಿಗದಿಪಡಿಸಲಾಗಿದೆ. ಅದರಂತೆ NET/ SLET/Ph.D ಪದವಿ ಹೊಂದದೇ ಇರುವ ಅತಿಥಿ ಉಪನ್ಯಾಸಕರಿಗೆ ಪ್ರತಿ ಗಂಟೆಗೆ ರೂ. 750/- ಗರಿಷ್ಠ ರೂ. 36,000/- ನಿಗದಿಪಡಿಸಲಾಗಿದೆ. ಈ ದರಗಳ ಆಧಾರದ ಮೇಲೆ NET/ SLET/Ph.D ಪದವಿ ಹೊಂದಿದ ಅತಿಥಿ ಉಪನ್ಯಾಸಕರು ತಿಂಗಳಿಗೆ 64 ಗಂಟೆಗಳ ಬದಲಾಗಿ 40 ಗಂಟೆಗಳ ಪಾಠ ಮಾಡಿದ್ದಲ್ಲಿ ಗರಿಷ್ಠ 50,000/- ಪಡೆಯಲು ಅರ್ಹರಾಗುತ್ತಾರೆ ಅದರಂತೆ NET/ SLET/Ph.D ಇಲ್ಲದಿರುವವರು ತಿಂಗಳಿಗೆ 64 ಗಂಟೆಗಳ ಬದಲಾಗಿ 40 ಗಂಟೆಗಳು ಪಾಠ ಮಾಡಿದರೆ ರೂ. 36,000/- ಪಡೆಯಲು ಅರ್ಹರಾಗುತ್ತಾರೆ. ಇದರಿಂದಾಗಿ ವಾರಕ್ಕೆ 16 ಗಂಟೆಗಳ (ಪ್ರಾಯೋಗಿಕ ವಿಷಯಗಳಿಗೆ 20 ಗಂಟೆಗಳಿಗೆ) ಲೆಕ್ಕದಲ್ಲಿ ತಿಂಗಳಿಗೆ 64 ಗಂಟೆಗಳ ಪಾಠ ಪ್ರವಚನವನ್ನು ಕಡ್ಡಾಯಗೊಳಿಸಿ ಅದರ ಆಧಾರದ ಮೇಲೆ ಪ್ರತಿಗಂಟೆಗೆ ಸಂಭಾವನೆ ನಿಗದಿಪಡಿಸುವುದು ಉಚಿತವಾಗುತ್ತದೆ.

ಮೇಲಿನ ಪ್ರಸ್ತಾವನೆಯ ಹಿನ್ನೆಲೆಯಲ್ಲಿ ಕೆಳಕಂಡ ವಿಷಯಗಳ ಕುರಿತು ಸಿಂಡಿಕೇಟ್ ಸಭೆ ತೀರ್ಮಾನ ಕೈಗೊಳ್ಳಬೇಕಾಗಿದೆ.

1) 2022-23ನೇ ಸಾಲಿನಿಂದ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳಲ್ಲಿ ಸ್ನಾತಕ ವ್ಯಾಸಂಗ ಪ್ರಾರಂಭಿಸಲು ಅಗತ್ಯವಾದ ಬೊಧಕ/ಬೋಧಕೇತರ ಹುದ್ದೆಗಳ ಸೃಜನೆಗೆ ಮತ್ತು ಅವರ್ತಕ, ಅನಾವರ್ತಕ ವೆಚ್ಚಗಳ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಅನುಮೋದನೆ.

2) 2022-23ನೇ ಸಾಲಿನಿಂದ ಸ್ನಾತಕ ವ್ಯಾಸಂಗ ಪ್ರಾರಂಭಿಸಲು ಅಗತ್ಯವಾದ ಭೌತಿಕ ಸೌಲಭ್ಯಗಳನ್ನು ಒದಗಿಸಲು ಹಾಗೂ ಬೊಧಕ/ಬೋಧಕೇತರ ಹುದ್ದೆಗಳಿಗೆ ತಾತ್ಕಾಲಿಕವಾಗಿ ಹಾಗೂ ಅತಿಥಿ ಉಪನ್ಯಾಸಕರನ್ನು ನಿಯಮಾನುಸಾರ ನೇಮಿಸಲು ಅನುಮೋದನೆ.

3) ಸ್ನಾತಕ ವ್ಯಾಸಂಗಳಿಗಾಗಿ ಕಾಲೇಜು ಶಿಕ್ಷಣ ಇಲಾಖೆಯ ಸುತ್ತೋಲೆ ಸಂಖ್ಯೆ: ಕಾಶಿಇ/ನೇವಿ-1/ಅಉಅ/97/2021-22 ದಿನಾಂಕ 28.01.2022 ಪ್ರಕಾರ ಅತಿಥಿ ಉಪನ್ಯಾಸಕರಿಗೆ ಪ್ರಸ್ತುತ ನೀಡಲಾಗುತ್ತಿರುವ ಕಲಾ/ವಾಣಿಜ್ಯ ವಿಷಯಗಳಿಗೆ ಗರಿಷ್ಠ 15 ಗಂಟೆಗಳ ಹಾಗೂ ವಿಜ್ಞಾನ ವಿಷಯಗಳು/ಪ್ರಾಯೋಗಿಕ ತರಗತಿಗಳಿಗೆ ಗರಿಷ್ಠ 19 ಗಂಟೆಗಳ ಕಾರ್ಯಭಾರವನ್ನು ಘಟಕ ಕಾಲೇಜು ಒಳಗೊಂಡಂತೆ ತಿಂಗಳಿಗೆ ಗರಿಷ್ಠ ರೂ.30,000/- ಗಳ ಗೌರವಧನವನ್ನು ನಿಗಧಿಪಡಿಸಿ ನೀಡಬಹುದಾಗಿದೆ.

ನಿಗದಿತ ಗರಿಷ್ಠ ಗಂಟೆಗಳ ಕಾರ್ಯಭಾರ ಇಲ್ಲದಿದ್ದಲ್ಲಿ, ಕಾರ್ಯಭಾರದ ಆಧಾರದಮೇಲೆ ಗರಿಷ್ಠ ಗೌರವಧನವನ್ನು ಪ್ರಮಾಣಕ್ಕನುಗುಣವಾಗಿ ಪ್ರತಿ ಗಂಟೆಗೆ ರೂ.500/- ನಿಗದಿಪಡಿಸಬಹುದು.

4) ಪ್ರಸ್ತುತ ಸ್ನಾತಕೋತ್ತರ ವಿಭಾಗಗಳ ಅತಿಥಿ ಉಪನ್ಯಾಸಕರ ಗರಿಷ್ಠ ರೂ. 50,000/- ಹಾಗೂ ರೂ. 40,000/- ಗಳ ಸಂಭಾವನೆಯನ್ನು ಅವರಿಗೆ ನಿಗದಿಪಡಿಸಲಾದ ವಾರಕ್ಕೆ 16 ಗಂಟೆಗಳ ಲೆಕ್ಕದಲ್ಲಿ ತಿಂಗಳಿಗೆ 64 ಗಂಟೆಗಳ (ಪ್ರಾಯೋಗಿಕ ವಿಷಯಗಳಿಗೆ ವಾರಕ್ಕೆ 20 ಗಂಟೆ ಹಾಗೂ ತಿಂಗಳಿಗೆ 80 ಗಂಟೆಗಳ) ಅನುಪಾತದಲ್ಲಿ ಪ್ರತಿಗಂಟೆಗೆ NET/ SLET/Ph.D ಆದವರಿಗೆ ಗಂಟೆಗೆ ರೂ. 780/- ಗರಿಷ್ಠ ರೂ.49,920/- ಹಾಗೂ NET/ SLET/Ph.D ಆಗದಿರುವುದಲ್ಲಿ ಗಂಟೆಗೆ ರೂ.680/- ಗರಿಷ್ಠ ರೂ.43,520/- ನಿಗದಿ ಪಡಿಸಿ ಪರಿಷ್ಕರಿಸುವುದು.

5) 16 (ಪ್ರಾಯೋಗಿಕ ವಿಷಯ–20) ಗಂಟೆಗಳಿಗಿಂತ ಕಡಿಮೆ ಭೋದನಾ ಅವಧಿ ಹೊಂದಿದವರನ್ನು ಅರೆಕಾಲಿಕೆ ಅತಿಥಿ ಉಪನ್ಯಾಸಕರುಗಳೆಂದು ಪರಿಗಣಿಸಿ ಮೇಲಿನ ದರಗಳ ಪ್ರಕಾರ ಪಾಠ ಮಾಡಿದ ಅವಧಿಗೆ ಸಂಭಾವನೆ ಪಾವತಿಸುವದು.

ಈ ಕುರಿತು ಕೆಳಕಂಡ ಲೆಕ್ಕ ಶೀರ್ಷಿಕೆಗಳಲ್ಲಿ ಕಲ್ಪಿಸಿರುವ ಆಯವ್ಯಯಗಳಲ್ಲಿ ವೆಚ್ಚವನ್ನು ಭರಿಸಬಹುದಾಗಿದೆ.

ಲಕ್ಷಗಳಲ್ಲಿ

| | | |
|---|---|---|
| i. | UG program as per NEP- 2-02-006-252 | 200.00 |
| ii. | Honorarium to Guest Faculty-4-09-022-118 | 850.00 |
| iii. | Equipments – 03-16-43-052 | 50.00 |
| iv. | Furniture & fixture– 03-16-46-056 | 400.00 |
| v. | Chemical & Consumables – 4-12-059-193 | 25.00 |

ವಿಷಯವನ್ನು ಸಿಂಡಿಕೇಟ್ ಸಭೆಯ ಒಪ್ಪಿಗೆಗಾಗಿ ಹಾಗೂ ಮೇಲಿನಂತೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ಕೋರಿ ಮಂಡಿಸಿದೆ.

ಸಿಂಡಿಕೇಟ್ ತೀರ್ಮಾನ:

ಅ) ಪ್ರಸ್ತಾವನೆಗೆ ಅನುಮೋದನೆ ನೀಡಿ, ಸ್ನಾತಕೋತ್ತರ ವಿಭಾಗಗಳಲ್ಲಿ ಸ್ನಾತಕ ವ್ಯಾಸಂಗ ಪ್ರಾರಂಭಿಸಲು ಅಗತ್ಯವಾದ ಹುದ್ದೆಗಳ ಸೃಜನೆ ಒದಗಿಸಬೇಕಾದ ಭೌತಿಕ ಸೌಲಭ್ಯಗಳನ್ನು ಒಳಗೊಂಡ ಆವರ್ತಕ ಅನಾವರ್ತಕ ವೆಚ್ಚಗಳ ಕುರಿತು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡಲಾಯಿತು.

ಆ) **2022–23**ನೇ ಸಾಲಿನಿಂದ ಸ್ನಾತಕ ವ್ಯಾಸಂಗ ಪ್ರಾರಂಭಿಸಲು ಅಗತ್ಯವಾದ ಭೌತಿಕ ಸೌಲಭ್ಯಗಳಾದ ಕೊಠಡಿ, ಪ್ರಯೋಗಾಲಯಗಳನ್ನು, ಗ್ರಂಥಾಲಯದ ಕೆಳಮಹಡಿ, ಹಳೆಯ ಕಾನೂನು ಕಾಲೇಜಿನಲ್ಲಿರುವ ಕೊಠಡಿಗಳು ಮತ್ತು ಹಿಂದಿನ ವಿದ್ಯಾರ್ಥಿನಿಯರ ವಸತಿ ಗೃಹ ಕಟ್ಟಡಗಳಿಗೆ ಅಗತ್ಯ ದುರಸ್ತಿ / ನವೀಕರಣಗೊಳಿಸಿ ಸ್ಥಳಾವಕಾಶ ಕಲ್ಪಿಸಲು **KTTP** ನಿಯಮಗಳ ಪ್ರಕಾರ ಕ್ರಮಕೈಗೊಳ್ಳಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.

ಇ) ತಾತ್ಕಾಲಿಕವಾಗಿ ಸಿಬ್ಬಂದಿಗಳನ್ನು ಹಾಗೂ ಅತಿಥಿ ಉಪನ್ಯಾಸಕರನ್ನು ನಿಯಮಾನುಸಾರ ನೇಮಕ ಮಾಡಿಕೊಳ್ಳಲು ಸಭೆ ಅನುಮೋದನೆ ನೀಡಲಾಯಿತು.

ಈ) **Ph.D/NET/SLFT** ಹೊಂದಿರುವ ಪೂರ್ಣಾವಧಿ ಅತಿಥಿ ಉಪನ್ಯಾಸಕರಿಗೆ ವಾರಕ್ಕೆ **16** ಗಂಟೆಗಳ ಲೆಕ್ಕದಲ್ಲಿ ತಿಂಗಳಿಗೆ **64** ಗಂಟೆಗಳ ಹಾಗೂ ಪ್ರಾಯೋಗಿಕ ವಿಷಯಗಳಾದಲ್ಲಿ ವಾರಕ್ಕೆ **20** ಗಂಟೆಗಳ ಲೆಕ್ಕದಲ್ಲಿ (**3** ಗಂಟೆಗಳ ಪ್ರಯೋಗಾಲಯದ ಕಾರ್ಯಭಾರವನ್ನು **2** ಗಂಟೆಗೆಯ ಅವಧಿ ಎಂದು ಪರಿಗಣಿಸಿ) ತಿಂಗಳಿಗೆ ಗರಿಷ್ಠ **80** ಗಂಟೆಗಳ ಕಾರ್ಯಭಾರ ನಿಗಧಿಪಡಿಸಿ ಪ್ರತಿ ಗಂಟೆಗೆ ರೂ, **780.00** (ರೂಪಾಯಿ ಏಳುನೂರ ಎಂಭತ್ತು) ರಂತೆ ಗರಿಷ್ಠ **49,920.00** (ರೂಪಾಯಿ ನಲವತ್ತೊಂಭತ್ತು ಸಾವಿರದ ಒಂಭೈನೂರ ಇಪ್ಪತ್ತು) ಹಾಗೂ **Ph.D/NET/SLFT** ಇಲ್ಲದಿರುವ ಪೂಣಾವಧಿ ಅತಿಥಿ ಉಪನ್ಯಾಸಕರಿಗೆ ವಾರಕ್ಕೆ **16** ಗಂಟೆಗಳ ಲೆಕ್ಕದಲ್ಲಿ ತಿಂಗಳಿಗೆ **64** ಗಂಟೆಗಳ ಹಾಗೂ ಪ್ರಾಯೋಗಿಕ ವಿಷಯಗಳಾದಲ್ಲಿ ವಾರಕ್ಕೆ **20** ಗಂಟೆಗಳ ಲೆಕ್ಕದಲ್ಲಿ (**3** ಗಂಟೆಗಳ ಪ್ರಯೋಗಾಲಯದ ಕಾರ್ಯಭಾರವನ್ನು **2** ಗಂಟೆಗೆಯ ಅವಧಿ ಎಂದು ಪರಿಗಣಿ) ತಿಂಗಳಿಗೆ ಗರಿಷ್ಠ **80** ಗಂಟೆಗಳ ಕಾರ್ಯಭಾರ ನಿಗಧಿಪಡಿಸಿ ಪ್ರತಿ ಗಂಟೆಗೆ ರೂ; **680.00** (ರೂಪಾಯಿ ಆರುನೂರ ಎಂಭತ್ತು) ರಂತೆ ಗರಿಷ್ಠ **43,520.00** (ರೂಪಾಯಿ ನಲವತ್ತ ಮೂರು ಸಾವಿರದ ಐದು ನೂರ ಇಪ್ಪತ್ತು) ನಿಗಧಿ ಪಡಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

**ಉ) ವಾರಕ್ಕೆ 16 ಗಂಟೆಗಳ (ಪ್ರಾಯೋಗಿಕ ವಿಷಯಗಳಾದಲ್ಲಿ 20 ಗಂಟೆ) ಗಿಂತ ಕಡಿಮೆ ಬೋಧನಾ ಅವಧಿ ಇರುವ ಅತಿಥಿ ಉಪನ್ಯಾಸಕರನ್ನು ಅರೆಕಾಲಿಕ ಅತಿಥಿ ಉಪನ್ಯಾಸಕರೆಂದು ಪರಿಗಣಿಸಿ ಮೇಲಿನ ದರಗಳ ಪ್ರಕಾರ ಪಾಠ ಮಾಡಿದ ಅವಧಿಗೆ ಸಂಭಾವನೆ ಪಾವತಿಸಬೇಕೆಂದು ಸಭೆ ತೀರ್ಮಾನಿಸಿತು.**

**ಅಧ್ಯಕ್ಷರ ಅನುಮತಿಯ ಮೇರೆಗೆ ಇನ್ನಿತರೆ ವಿಷಯಗಳು**

1. ಮಾನ್ಯ ಸದಸ್ಯರಾದ ಶ್ರೀ ಹೆಚ್.ಎನ್. ಹರಿಪ್ರಸಾದ ರವರು 2019-20 ಮತ್ತು 2020-21ರಲ್ಲಿ ಪ್ರವೇಶ ಪಡೆದ M.Sc Plant Science ಮತ್ತು M.Sc Animal Science ಕೋರ್ಸುಗಳ ವಿದ್ಯಾರ್ಥಿಗಳಿಗೆ M.Sc Botany ಮತ್ತು M.Sc Zoology ಎಂದು ಪದವಿ ನೀಡಬೇಕೆಂದು ಪ್ರಸ್ತಾಪಿಸಿದರು.

ಕುಲಪತಿಗಳು ವಿವರಣೆ ನೀಡಿ ವಿಷಯವನ್ನು ನಿಯಮಾನುವಳಿಗಳ ಅಡಿಯಲ್ಲಿ ಹಾಗೂ ತಾಂತ್ರಿಕ ದೃಷ್ಟಿಯಿಂದ ಪರಿಗಣಿಸಬೇಕಾಗುತ್ತದೆ. ಈಗಾಗಲೇ ಈ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ನೀಡಲಾಗಿದೆ. ಘಟಿಕೋತ್ಸವದಲ್ಲಿ ಪ್ರಮಾಣ ಪತ್ರಗಳನ್ನು ಪ್ರದಾನ ಮಾಡಲಾಗಿದೆ. ಈ ಹಂತದಲ್ಲಿ ಪದವಿಯ ಹೆಸರು ಬದಲಾವಣೆಗೆ ಅವಕಾಶವಿರುವುದಿಲ್ಲ. ಸಮಾನಾಂತರ ಪದವಿ ಪ್ರಮಾಣ ಪತ್ರ ನೀಡಿದಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಇದಲ್ಲದೆ ಸಂಬಂಧಿಸಿರುವ ಸಂಸ್ಥೆ/ಇಲಾಖೆಗಳಿಗೆ ಮತ್ತು ಸರ್ಕಾರಕ್ಕೆ ಪತ್ರ ಬರೆದು ಇಂತಹ ವಿದ್ಯಾರ್ಥಿಗಳನ್ನು ಎಂ.ಎಸ್ಸಿ ಸಸ್ಯಶಾಸ್ತ್ರ ಮತ್ತು ಎಂ.ಎಸ್ಸಿ ಪ್ರಾಣಿಶಾಸ್ತ್ರ ವಿದ್ಯಾರ್ಥಿಗಳಿಗೆ ಸರಿಸಮಾನವಾಗಿ ಪರಿಗಣಿಸುವಂತೆ ಕೋರಲಾಗುವುದು

2. ಸದಸ್ಯರಾದ ಶ್ರೀ ಹೆಚ್.ಎನ್.ಹರಿಪ್ರಸಾದರವರು ಸೇಂಟ್ ಜೋಸೆಫ್ ಮಹಾವಿದ್ಯಾಲಯದವರು, ವಿಶ್ವವಿದ್ಯಾನಿಯದ ಸೂಚನೆಗಳನ್ನು ಪಾಲಿಸದೆ ಇರುವುದಕ್ಕೆ ಸಂಬಂಧಿಸಿದಂತೆ ದಿನಾಂಕ 28.04.2022 ರಂದು ಉನ್ನತ ಶಿಕ್ಷಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದು ಅದರಲ್ಲಿ ಪ್ರಾಧಿಕಾರಗಳ ಅನುಮೋದನೆ ಇಲ್ಲದೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ ಅನುಚ್ಛೇದ 64ರ ಅಡಿಯಲ್ಲಿ ಸ್ವಾಯತ್ತತೆಯನ್ನು ರದ್ದು ಪಡಿಸುವ ಕುರಿತು ಪ್ರಸ್ತಾಪಿಸಿದರು.

ಕುಲಸಚಿವರು ವಿವರಣೆ ನೀಡಿ ಸದರಿ ಕಾಲೇಜಿನವರು UUCMS Portal ನಲ್ಲಿ ಮಾಹಿತಿ ದಾಖಲಿಸಬೇಕೆಂದು ಸರ್ಕಾರ ಮತ್ತು ವಿಶ್ವವಿದ್ಯಾನಿಲಯ ನೀಡಿದ ನಿರ್ದೇಶನಗಳನ್ನು ಪಾಲನೆ ಮಾಡಿರುವುದಿಲ್ಲ. ಇದಲ್ಲದೆ ಪ್ರವೇಶಗಳ ಮಾನ್ಯತೆ ಕುರಿತಂತೆ ವಿಶ್ವವಿದ್ಯಾನಿಲಯ ಸೂಚಿಸಿದ ವಿಧಿ ವಿಧಾನಗಳನ್ನು ಸಹ ಪಾಲಿಸಿರುವುದಿಲ್ಲ. ಈ ಹಿನ್ನಲೆಯಲ್ಲಿ ಅಧಿನಿಯಮದಲ್ಲಿರುವ ಶಿಸ್ತುಕ್ರಮದ ಅವಕಾಶಗಳನ್ನು ತಿಳಿಸಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಎಂದು ಹೇಳಿದರು.

ಕುಲಪತಿಗಳು ವಿಷಯದ ಗಂಭೀರತೆಯನ್ನು ಸಭೆಗೆ ತಿಳಿಸಿ ಸರ್ಕಾರದ UUCMS Portal ಮುಖಾಂತರ ವಿದ್ಯಾರ್ಥಿಗಳ ವಿವರಗಳನ್ನು ದಾಖಲಿಸಬೇಕಾಗಿದೆ. ಇದು ಎಲ್ಲ ಮಹಾವಿದ್ಯಾಲಯಗಳಿಗೆ ಕಡ್ಡಾಯವಾಗಿ ಅನ್ವಯವಾಗುತ್ತದೆ. ಈ ಮಾಹಿತಿಗಳನ್ನು UUCMS Portal ನಲ್ಲಿ ಅಳವಡಿಸಲು ವಿಶ್ವವಿದ್ಯಾಲಯದ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡಿದೆ. SC/ST ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡಲು ಸಹ ಈ ತತ್ರಾಂಶದಲ್ಲಿ ನೀಡುವ ಮಾಹಿತಿಯನ್ನು ಪರಿಗಣಿಸಲಾಗುತ್ತದೆ. ಇಂತಹ ಸಂದರ್ಭದಲ್ಲಿ ಮಹಾವಿದ್ಯಾಲಯದ ನಿರಾಕರಣೆಯ ಧೋರಣೆಯನ್ನು ಗಂಭೀರವಾಗಿ ಪರಿಗಣಿಸಿ ಪತ್ರ ಬರೆಯಲಾಗಿದೆ. ಪತ್ರದಲ್ಲಿ ಅಧಿನಿಯಮದಲ್ಲಿರುವ ಅವಕಾಶವನ್ನು ತಿಳಿಸಲಾಗಿದೆಯೇ ಹೊರತು, ಯಾವುದೇ ಕ್ರಮದ ಪ್ರಸ್ತಾಪ ಇರುವುದಿಲ್ಲ. ಕಠಿಣ ಕ್ರಮದ ಪ್ರಸ್ತಾವನೆಗಳನ್ನು ಖಂಡಿತವಾಗಿಯೂ ಪ್ರಾಧಿಕಾರಗಳ ಗಮನಕ್ಕೆ ತಂದು ನಂತರ ವಿಧಿ ವಿಧಾನಗಳನ್ನು ಅನುಸರಿಸಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

3. ಸದಸ್ಯರಾದ ಶ್ರೀ ರಂಗಪ್ಪನವರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ವಿಭಾಗಗಳಲ್ಲಿ ಜರುಗುತ್ತಿರುವ ಸಂಶೋಧನೆ ಕುರಿತು ಪ್ರಸ್ತಾಪಿಸಿದರು.

ಕುಲಪತಿಗಳು ಈ ಕುರಿತು ವಿವರಿಸಿ, ಶೈಕ್ಷಣಿಕ ಸಂಶೋಧನೆ, ಸಮಾಲೋಚನೆ (Consultancy) ಔದ್ಯೋಗಿಕ ಸಂಸ್ಥೆಗಳೊಂದಿಗೆ ಸಮನ್ವಯ ಇತ್ಯಾದಿಗಳು ತುಂಬಾ ಅಗತ್ಯವಾದ ಪ್ರಕ್ರಿಯೆಗಳಾಗಿದ್ದು, ಈ ಕುರಿತು ಮುಂದಿನ ವರ್ಷದ ವಿಭಾಗವಾರು ಕ್ರಿಯಾಯೋಜನೆ ಸಲ್ಲಿಸಲು ಎಲ್ಲಾ ಸ್ನಾತಕೋತ್ತರ ವಿಭಾಗಗಳಿಗೆ ತಿಳಿಸಲಾಗಿದೆ. ನ್ಯಾಕ್ ಮಾನ್ಯತೆಯಲ್ಲಿ Provisional Accreditation ಗಾಗಿ ಅವಕಾಶ ಕಲ್ಪಿಸಿದ್ದಾರೆ. ಈ ಕುರಿತು ಪ್ರಯತ್ನಗಳು ಜಾರಿಯಲ್ಲಿವೆ ಎಂದು ಹೇಳಿದರು.

ಸದಸ್ಯರಾದ ಡಾ: ವಿ.ಆರ್. ದೇವರಾಜ್ ರವರು ಚರ್ಚೆಯಲ್ಲಿ ಭಾಗವಹಿಸಿ, ಹೊಸ ವಿಶ್ವವಿದ್ಯಾನಿಲಯಕ್ಕೆ 12(ಬಿ) ಮತ್ತು ನ್ಯಾಕ್ ಮಾನ್ಯತೆ ಇಲ್ಲದಿರುವುದರಿಂದ ಸಂಶೋಧನೆಗಾಗಿ ವಿವಿಧ ಸಂಸ್ಥೆಗಳು ನೀಡುವ ಧನ ಸಹಾಯಕ್ಕಾಗಿ ಅರ್ಜಿ ಸಲ್ಲಿಸಲು ಅರ್ಹತೆ ಸ್ಥಗಿತವಾಗಿದೆ. ಹಿಂದೆ ಮಂಜೂರಾದ ಧನಸಹಾಯದ ಯೋಜನೆಗಳು ಮುಕ್ತಾಯಗೊಂಡಿರುತ್ತದೆ ಪಿ.ಹೆಚ್.ಡಿ ಸಂಶೋಧನೆ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕನಿಷ್ಠ ಒಂದು ಸಂಶೋಧನಾ Fellowship ಮಂಜೂರಿಸಲು ಮತು ಸಂಶೋಧನೆಗೆ ಆಯ್ಯವ್ಯಯದಲ್ಲಿ ಅವಕಾಶ ಕಲ್ಪಿಸಿ ಸಂಶೋಧನೆಯ ಮೇಲ್ವಿಚಾರಣೆಗಾಗಿ Research Advisory Committee ರಚಿಸಬೇಕೆಂದು ಸಲಹೆ ನೀಡಿದರು.

ಕುಲಪತಿಗಳು ಮಾಹಿತಿ ನೀಡಿ, ಸಂಶೋಧನಾ ಸಲಹಾ ಸಮಿತಿ (Research Advisory Committee) ರಚಿಸಿ ಸಂಶೋಧನಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ (Fellowship) ನೀಡುವುದು, ಸಂಶೋಧನೆಗಾಗಿ ವಿಶ್ವವಿದ್ಯಾನಿಲಯದಿಂದ ಅನುದಾನ ಒದಗಿಸುವುದು ಮತ್ತು ಸಂಶೋಧನಾ ಲೇಖನಗಳನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ Impact ಪತ್ರಿಕೆ/ ಜರ್ನಲ್‌ಗಳಲ್ಲಿ ಪ್ರಕಟಿಸಲು ವಿಧಿಸುವ ಶುಲ್ಕವನ್ನು ಮಂಜೂರು ಮಾಡುವುದು ಇತ್ಯಾದಿ ವಿಷಯಗಳನ್ನು Research Advisory Committee ವ್ಯಾಪ್ತಿಗೆ ಒಳಪಡಿಸಲಾಗುವುದು ಎಂದು ತಿಳಿಸಿದರು.

ಶಿಕ್ಷಕರು ತಮ್ಮ ತಮ್ಮ ವಿಭಾಗಗಳಲ್ಲಿ ಕೈಗೊಳ್ಳಬಹುದಾದ ಸಂಶೋಧನೆಗಳ ಕುರಿತು ಕ್ರಿಯಾ ಯೋಜನೆ ಸಲ್ಲಿಸಿದಲ್ಲಿ ಅಂತಹ ಪ್ರಸ್ತಾವನೆಗಳನ್ನು ಸಂಶೋಧನಾ ಸಲಹಾ ಸಮಿತಿ ಎದುರು ಮಂಡಿಸಿ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿದರು.

ಶಿಕ್ಷಕರು ಆಯಾ ವರ್ಷಗಳಲ್ಲಿ ನಿರ್ವಹಿಸಿದ ಸಂಶೋಧನಾ ಚಟುವಟಿಕೆಗಳು, ಸಂಶೋಧನಾ ಪತ್ರಿಕೆ ಪ್ರಕಟಣೆ ವಿಷಯಕ್ಕೆ ಸಂಬಂಧಿಸಿದ Seminar Conference ಗಳಲ್ಲಿ ಭಾಗವಹಿಸಿರುವ ಕುರಿತು ಮಾಹಿತಿ ನೀಡುವುದನ್ನು ಕಡ್ಡಾಯಗೊಳಿಸಿ ಸುತ್ತೋಲೆ ಹೊರಡಿಸಲಾಗುವುದು ಎಂದು ತಿಳಿಸಿದರು.

ಕುಲಪತಿಗಳ ವಿವರಣೆಗಳಿಗೆ ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.

ಕುಲಸಚಿವರು (ಮೌಲ್ಯಮಾಪನ) ರವರಿಂದ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

| | | |
|---|---|---|
| ಸಹಿ/- | | ಸಹಿ/- |
| ಕುಲಸಚಿವರು | | ಕುಲಪತಿಗಳು |

ಕುಲಸಚಿವರು
ಸದಸ್ಯ ಕಾರ್ಯದರ್ಶಿಗಳು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ